ಪಂಚಮ

ಸಂಪುಟ : 6 ಸಂಚಿಕೆ : 8-9 ಬೆಲೆ : 50ಪೈಸೆ ಮೇ 1982

ಕೋಲಾರದಲ್ಲಿ ಬೃಹತ್ ದಲಿತ ಕಲಾಮೇಳ

ದಿನ ಬೆಳಗಾದರೆ ಕೊಲೆಗಳ ಸುದ್ದಿ ಮಾಡುತ್ತಿದ್ದ ಕೋಲಾರದಲ್ಲೀಗ ದಲಿತ ಸಂಘರ್ಷ ಸಮಿತಿಯ ಹುಟ್ಟಿನಿಂದಾಗಿ ಹೋರಾಟದಿಂದಾಗಿ ಕೊಲೆಗಳು ನಿಂತು ಕಲೆ ದನಿ ಎತ್ತಿದೆ. ದಲಿತ ಸಂಘರ್ಷ ಸಮಿತಿಯ ಕೋಲಾರ ಶಾಖೆಯು ದಲಿತ ಕಲಾಮೇಳವನ್ನು ಮೇ 6ನೇ ತಾರೀಖು ನಡೆಸುತ್ತಿದ್ದು ಅಂಬೇಡ್ಕರ್ ನೆನಪನ್ನು ದಶದಿಕ್ಕುಗಳಿಗೂ ಹಬ್ಬಿಸುತ್ತಿದೆ.

ಈ ಕಲಾಮೇಳದಲ್ಲಿ ಸಾವಿರಾರು ತಮ್ಮಟೆಯ ದನಿಯು ಕೊಲೆಗಡುಕರ ಎದೆ ನಡುಗಿಸುವುದು. ಇದರೊಡನೆ ಕೋಲುವರಸೆ, ಕರಗ, ಬಿಜಿಲಿ ಇತ್ಯಾದಿ ವೈವಿಧ್ಯಮಯ ಕುಣಿತಗಳೊಂದಿಗೆ ದಲಿತ ಕಲಾಮೆರವಣಿಗೆ ನಡೆಯುವುದು.

ಇದೇ ಸಂದರ್ಭದಲ್ಲಿ ನಡೆಯುವ ದಲಿತ ಕಲೆಗಳ ವಿಚಾರಗೋಷ್ಠಿಯನ್ನು ಕಲಾವಿದ ಬಾನಂದೂರು ಕೆಂಪಯ್ಯ ಉದ್ಘಾಟಿಸುವರು. ಬಿ.ಕೃಷ್ಣಪ್ಪ ಅಧ್ಯಕ್ಷರಾಗಿರುವ ಈ ಸಭೆಯಲ್ಲಿ ಜಿಲ್ಲಾಧಿಕಾರಿ ಎಚ್.ಬಸವಯ್ಯ ಮುಖ್ಯ ಅತಿಥಿಗಳಿದ್ದು ಸಿದ್ದಲಿಂಗಯ್ಯ ಮತ್ತು ಇಂದೂಧರ ಹೊನ್ನಾಪುರ ಭಾಷಣಕಾರರಾಗಿರುವರು. ಅದೇ ದಿನ ಸಂಜೆ ನಡೆಯುವ ಬಹಿರಂಗ ಸಭೆಯಲ್ಲಿ ಪಿ.ಲಂಕೇಶ್, ಬರಗೂರ್ ರಾಮಚಂದ್ರಪ್ಪ ಭಾಗವಹಿಸುವರು. ಕಲೆಗಳ ವಸ್ತು ಪ್ರದರ್ಶನ ಮೆರವಣಿಗೆ ದೇವನೂರ ಮಹಾದೇವ ಉದ್ಘಾಟಿಸುವರು. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಾಗವಹಿಸಲು ಕರೆ ನೀಡಲಾಗಿದೆ

ವಿದ್ಯಾರ್ಥಿಯ ಮೇಲೆ ಗುಂಡೂಭಾರ

ಒಂದು ರಾಜ್ಯದ ಭಾಷೆಯನ್ನು ಆ ರಾಜ್ಯವು ಕಡ್ಡಾಯ ಕಲಿಕೆ ವಿಷಯವನ್ನಾಗಿಸಲು ಸರ್ಕಾರಕ್ಕೆ ಘನತೆ ಅನ್ನುವುದೇನಾದರೂ ಇದ್ದಿದ್ದರೆ ಒಂದು ಸಮಿತಿ ನೇಮಿಸಿ ಅಪ್ಪಣೆ ಕೇಳುವ ಅಗತ್ಯವಿರುತ್ತಿರಲಿಲ್ಲ. ಜಡವಾದ ಸರ್ಕಾರ ಗೋಕಾಕ್ ಸಮಿತಿಯನ್ನು ನೇಮಿಸಿತು. ಈ ಸಮಿತಿ ನೇಮಕದ ಒಳಗಿದ್ದುದೂ ಕನ್ನಡವಲ್ಲ; ಸಂಸ್ಕೃತ ಎತ್ತುವುದಾಗಿತ್ತು. ಕನ್ನಡದ ಸ್ಥಾನದಲ್ಲಿ ಸಂಸ್ಕೃತ ಉಳಿಸುವುದಾಗಿತ್ತು, ಆಗ ಸಂಸ್ಕೃತದ ವಿರುದ್ಧ ಎದ್ದಿದ್ದ ಕನ್ನಡದ ಸೊಲ್ಲನ್ನು ಒಳಗೊಳಗೇ ಹಿಚುಕಿ ಕೊಲ್ಲುವುದಾಗಿತ್ತು. ಆದರೆ ಕನ್ನಡ ಜನ ಬಂಡಾಯ ಸಾಹಿತ್ಯ ಸಂಘಟನೆ ಗೋಕಾಕ್ ಸಮಿತಿಯನ್ನು ಕ್ಷಣವೂ ಕಣ್ಣು ಮುಚ್ಚದೆ ನೋಡುತ್ತಿತ್ತು. ಹಾಗಾಗಿ ಕನ್ನಡ ವಿರೋಧಿ ನಿಲುವು ತಾಳಿದ್ದರೆ ಗೋಕಾಕ್ ಉಳಿಯುತ್ತಿರಲಿಲ್ಲ. ಹಾಗಾಗಿ ಕನ್ನಡ ಪರ ನಿಲುವು ತಳೆದು ಗೋಕಾಕ್ ಉಳಿದರು.

ಗೋಕಾಕ್‌ವರದಿ ಬಂದಾದ ಮೇಲೆ ಸೀನರಿ ಬದಲಾಯ್ತು. ಸಂಸ್ಕೃತ v/s ಕನ್ನಡ ಇದ್ದುದು ಪರಮಾತೃಭಾಷೆ v/s ಕನ್ನಡಕ್ಕೆ ತಿರುಗಿಕೊಂಡಿತು. ಹೀಗಾದಾಗ ಸಂಸ್ಕೃತಿಗಳು ಕನ್ನಡದ ಪರವಾಗಿ ಕನ್ನಡಿಗರಿಗಿಂತ ಸ್ವಲ್ಪಹೆಚ್ಚಾಗಿ ಮಾತನಾಡಿದರು.

ಕರ್ನಾಟಕದ ಮುಖ್ಯಮಂತ್ರಿ ಎನ್ನಿಸಿಕೊಂಡವರು ಅಕ್ಷರಗಳಿಲ್ಲದ ತಮ್ಮ ಎದೆಯೊಳಗೆ ಸಂಸ್ಕೃತ ಇಟ್ಟುಕೊಂಡು ಬಾಯಲ್ಲಿ ಅಲ್ಪಸಂಖ್ಯಾತರ ಹಿತ ಮಾತನಾಡಿದರು. ತಾವು ಕಾರಣರಾದ ವರದಿಯನ್ನೆ ಮುಚ್ಚುವ ಮುಖ್ಯಮಂತ್ರಿ ಆಸೆ ಶ್ರೀ ಕುವೆಂಪು ಕರೆಯಿಂದಾಗಿ ಮಣ್ಣುಗೂಡಿತು. ಪೇಚಿಗೆ ಸಿಕ್ಕಿದ ಮುಖ್ಯಮಂತ್ರಿ ಗೋಕಾಕ್ ವರದಿ ಜಾರಿಗೆ ಒಪ್ಪಿಕೊಂಡೂ ಅದನ್ನು ಜಾರಿಗೊಳಿಸದೆ ಕಾಲ ನೂಕುತ್ತ ನಡೆದ ಪರಿಣಾಮವಾಗಿ ಕನ್ನಡ ಚಳವಳಿ ಭುಗಿಲ್ಲೆಂದಿತು. ಹೊಣೆಗೇಡಿ ಮುಖ್ಯಮಂತ್ರಿಯ ನೀತಿಯಿಂದಾಗಿ ಮೂರುಸಾವು ಲೆಕ್ಕವಿಡಲಾಗದಷ್ಟು ನೋವು ಅಪಾರ ಆಸ್ತಿನಷ್ಟ ಉಂಟಾಯ್ತು. ಚಳವಳಿಯ ಫಲವಾಗಿ ಒತ್ತಡಕ್ಕೆ ಸಿಕ್ಕಿದ ಮುಖ್ಯಮಂತ್ರಿ ಮಣಿದು

ದೇವನೂರ ಮಹಾದೇವ

(ಕೊನೆಯ ಪುಟಕ್ಕೆ)

ಡಿ.ಎಸ್.ಎಸ್. ಸಂಚಾಲಕನ ಮೇಲೆ ಕಾಂಗ್ರೆ ಹಲ್ಲೆ

(ವರದಿ : ಲಿಂಗಪ್ಪ)

ಏಪ್ರೀಲ್ ೧೪ ರಂದು ದೇಶಾದ್ಯಂತ ಡಾ. ಬಿ. ಆರ್. ಅಂಬೇಡ್ಕರರ ಜನ್ಮ ದಿನೋತ್ಸವವನ್ನು ದಲಿತರ ಹೆಸರಿನಲ್ಲಿ ತಮ್ಮಷ್ಟಕ್ಕೆ ತಾವೇ ಅದರ ಮುಖಂಡರೆಂದು ಘೋಷಿಸಿಕೊಂಡವರು ದಲಿತೋದ್ಧಾರದ ಗುತ್ತಿಗೆಯನ್ನೇ ತೆಗೆದುಕೊಂಡ ಸರ್ವಾಧಿಕಾರಿಯ ಚಮಚಾ ಕಾಂಗ್ರೆಗಳು, ಹಾಗೂ ಶತಮಾನಗಳಿಂದ "ಜೇಡ ರಕ್ತ ಹೀರುವಂತೆ" ದಲಿತರ ರಕ್ತ ಹೀರಿದ ಚಡ್ಡಿ ಲಾಠಿಧಾರಿಗಳು ಎಲ್ಲರೂ ತಾವೂ ಕಟ್ಟಾ ಅಂಬೇಡ್ಕರರ ವಾದಿಗಳಂತೆ ಹೇಳಿಕೊಂಡು ಆಚರಿಸಿದರು.

ಇದೇ ಸಂದರ್ಭದಲ್ಲಿ ರಾಯಚೂರು ಜಿಲ್ಲೆಯ ಗಂಗಾವತಿ ಶಾಖೆಯ ಸಂಚಾಲಕ ಇದೇ ತಾಲ್ಲೂಕಿನ ಗ್ರಾಮವಾದ ಕಾರಟಗಿಯಲ್ಲಿ ಕಾಂಗ್ರೆ ಟಿ. ಡಿ. ಬಿ. ಸದಸ್ಯ ದುರಗಪ್ಪ ಎಂಬುವನ ನೇತೃತ್ವದಲ್ಲಿ ಪಂಚಾಯತ ಚೇರ್‌ಮನ್ ಮತ್ತು ಬಿ. ಡಿ. ಓ. ಅವರ ಸಮ್ಮುಖದಲ್ಲಿ ಚಪ್ಪಲಿಯಿಂದ ಹೊಡೆಸಿಕೊಂಡು ದಮ್ಮು ಹಾಕಿಸಿಕೊಂಡಿದ್ದಾನೆ.

(13ನೇ ಪುಟಕ್ಕೆ)

ಮೇಕಪ್ ಅಳಿಸಿದ ಜಾತಿಯ ಬಣ್ಣ

ದಲಿತನೊಬ್ಬನು ನಾಟಕದ ಮೇಕಪ್ ಮಾಡಿದನೆಂದು ಗೊತ್ತಾದ ಮೇಲೆ ನಾಟಕದ ನಟರು ತಮ್ಮ ಬಣ್ಣವನ್ನು ಒರೆಸಿಕೊಂಡದ್ದಲ್ಲದೇ ಮೇಕಪ್ ಮಾಡಿದ ದಲಿತ ಕಲಾಕಾರನನ್ನು ಸ್ಥಳದಿಂದ ಹೊರದೂಡಿ ಅಪಮಾನ ಮಾಡಿದ ಘಟನೆಯೊಂದು ಹಾಸನ ಜಿಲ್ಲೆಯ ಆಲೂರಿನಿಂದ ವರದಿಯಾಗಿದೆ.

ಕೆಂಚಮ್ಮನ ಹೊಸಕೋಟೆಯಲ್ಲಿ ಈ ಘಟನೆ ನಡೆದಿದ್ದು. ಮೇಕಪ್ (ಪ್ರಸಾದನ) ಮಾಡಿದವನು ಅಸ್ಪೃಶ್ಯನೆಂಬ ಭಾವನೆಯಿಂದ ನಟರು ಹಾಗೂ ನಾಟಕದ ವ್ಯವಸ್ಥಾಪಕರು ಇಂತಹ ಹೀನ ಕೆಲಸ ಮಾಡಿದರೆಂದು ಗೊತ್ತಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಾಟಕ ಸ್ಪರ್ಧೆಗಳು ಇತ್ತೀಚೆಗೆ ನಡೆದಾಗ ಈ ಘಟನೆ ಸಂಭವಿಸಿತು.

ಮೇಕಪ್ ಮಾಡುವ ಸ್ಥಳ ದೇವಸ್ಥಾನವಾಗಿದ್ದು ದೇವಸ್ಥಾನದೊಳಗೆ ಹರಿಜನ ಕಲಾಕಾರ ಪ್ರವೇಶ ಮಾಡಿದ್ದಕ್ಕೂ ಕೂಡ ನಾಟಕದ ವ್ಯವಸ್ಥಾಪಕರು ಕೋಪಗೊಂಡು ತಕ್ಷಣ ಮೇಕಪ್‌ಮನ್‌ನನ್ನು ದೇವಸ್ಥಾನದಿಂದ ಹೊರಹೋಗಲು ತಿಳಿಸಲಾಯಿತು. ಅಷ್ಟೊತ್ತಿಗೆ ಆಗಲೇ ಕೆಲವು ಜನರಿಗೆ ಮೇಕಪ್ ಆಗಿದ್ದು, ಅಸ್ಪೃಶ್ಯನೊಬ್ಬ ತಮಗೆ ಮೇಕಪ್ ಮಾಡಿದನೆಂದು ಗೊತ್ತಾಗಿ ಅವರೆಲ್ಲ ಮೇಕಪ್ ಅಳಿಸಿಕೊಂಡು ಬೇರೆ ಜನರ ಹತ್ತಿರ ಮೇಕಪ್ ಮಾಡಿಸಿಕೊಂಡು ನಾಟಕ ಮಾಡಿದರೆಂದು ಗೊತ್ತಾಗಿದೆ.

ವಿಚಿತ್ರವೆಂದರೆ ಅಂದಿನ ನಾಟಕದ (ಲಚ್ಚಿ) ಕಥಾವಸ್ತು ದಲಿತರ ಶೋಷಣೆಯದಾಗಿತ್ತು.

ಮೇಕಪ್ ಮಾಡಲು ಹೋದ ದಲಿತ ಕಲಾವಿದ ಹಾಸನದ ಎಚ್.ಎಸ್. ಈರಯ್ಯ ಎನ್ನುವವರಾಗಿದ್ದು ಅವರನ್ನು ಮೇಕಪ್‌ಗಾಗಿ ಕರೆದೊಯ್ದ ನಾಟಕಕಾರರೊಬ್ಬರ ಮೇಲೆ ಕೂಡ ನಾಟಕ ವ್ಯವಸ್ಥಾಪಕರು ಹರಿಹಾಯ್ದರೆಂದು ಹೇಳಲಾಗಿದೆ.

(ಜನತಾ ಮಾಧ್ಯಮದಿಂದ)

ಉಚಿತ ನಿವೇಶನ ಯಾರಿಗೆ?

ಸರ್ಕಾರ ತನ್ನ ಘೋಷಣೆಯಲ್ಲಿ ೮ ಲಕ್ಷ ೧೦ಲಕ್ಷ ನಿವೇಶನಗಳನ್ನು ಬಡವರಿಗೆ ಉಚಿತವಾಗಿ ಹಂಚಲಾಗಿದೆ ಎಂದು ಪ್ರತಿದಿನ ಸಿನಿಮಾ ಪತ್ರಿಕೆ ಮೂಲೆ ಮೂಲೆಗಳಲ್ಲಿ ಪ್ರಚಾರ ಮಾಡುತ್ತಿದೆ. ಈ ಯೋಜನೆ ಬಡವರಿಗೆ ಅನುಕೂಲವಾಗಿಲ್ಲ ಎಂಬುದಕ್ಕೆ ಒಂದು ಸ್ಪಷ್ಟ ಉದಾಹರಣೆ ಬಂಗಾರಪೇಟೆ ತಾಲ್ಲೂಕಿನ ಚಾಮನಹಳ್ಳಿ ಗ್ರಾಮ. ಸುಮಾರು ಮುಕ್ಕಾಲು ಭಾಗ ದಲಿತರಿಂದ ಕೂಡಿರುವ ಈ ಗ್ರಾಮದಲ್ಲಿ ದಲಿತರು ೧೯೭೫ರಿಂದ ಉಚಿತ ನಿವೇಶನಕ್ಕಾಗಿ ಕಾದಿರುತ್ತಾರೆ. ಸರ್ಕಾರ ಒಂದನೇ ಸರ್ವೆನಂಬರಿನಲ್ಲಿ ಕೊಡುವುದಾಗಿ ತಿಳಿಸಿ, ಇಲ್ಲಿನ ಬ್ರಾಹ್ಮಣ ಛೇರ್ಮೆನ್ ಇದನ್ನೂ ತಪ್ಪಿಸಿ, ಎರಡನೇ ಸರ್ವೆ ನಂಬರಿನಲ್ಲಿ ಕೊಡುಸುವುದಾಗಿ ನಂಬಿಸಿ, ಈಗ ಅದಕ್ಕೂ ಸಂಚಕಾರ ಹಾಕಿದ್ದಾನೆ. ಈ ಗ್ರಾಮದ ಚಂಗಲರಾಯರೆಡ್ಡಿ ಎಂಬುವನು ತಾಲ್ಲೂಕು ಸೊಸೈಟಿ ಅಧ್ಯಕ್ಷನಾದ ಮೇಲೆ ಸರ್ವೆ ನಂ. ೨ನ್ನು ಕೊಂಡು ಹಾಕಿರುತ್ತಾನೆ. ಈಗ ದಲಿತರು ಮನೆಗಳಿಲ್ಲದೆ ಶ್ರೀಮಂತರ ಹಟ್ಟಿಗಳಲ್ಲಿ ಮಲಗುತ್ತಿದ್ದಾರೆ.

—ಮುನಿಯಪ್ಪ

ಅಭಿಪ್ರಾಯ

ದಲಿತರ ಕುರಿತು ಕ್ರೂರ ವೈಚಿತ್ರ್ಯಗಳು

ನಮ್ಮ 'ಪಂಚಮ' ಪತ್ರಿಕೆಯ ಏಪ್ರಿಲ್ ಪ್ರತಿ ಬಂದು ತಲುಪಿತು. ಪತ್ರಿಕೆಯ ಈ ಸಲದ ಸಂಚಿಕೆಯು ಪ್ರತಿಸಲದಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಹೃದಯ ಸೇರಿತು. ಈ ಸಂಚಿಕೆಯ ೮ನೇ ಪುಟದಲ್ಲಿ "ಹೊಲೇರಉಚ್ಚಿ" ಶಿರೋನಾಮೆ ಹೊತ್ತ ಶ್ರೀರಾಮ ಬಿದರೆಕೋಟೆ ಮೈಸೂರು-೬ ಇವರ ಒಕ್ಕಣೆ ಓದಿ ಇನ್ನೂ ಅಂತಹವೇ ಕೆಲವು ಮಾಹಿತಿಗಳನ್ನು ತಮ್ಮ ಪತ್ರಿಕೆಗೆ ತಿಳಿಸಬೇಕೆಂದು ಆಶಿಸಿ ಕೆಲವು ವಿಷಯಗಳನ್ನು ತಿಳಿಸಬಯಸುತ್ತೇನೆ.

(೧) ನಮ್ಮ ಗುಲಬರ್ಗಾ ಜಿಲ್ಲೆಯಲ್ಲಿ ಜೋಕುಮಾರನನ್ನು ಮಹಾಲಯ ಅಮವಾಸ್ಯೆಯ ನಂತರ ಬರುವ ಹುಣ್ಣಿಮೆಯಂದು ಊರಲೆಲ್ಲಾ ಮೆರವಣಿಗೆ ಮಾಡಿ ಹೊಲಗೇರಿಯಲ್ಲಿ ತಂದು ಅಲ್ಲಿ ಹೊಲಗೇರಿಯ ಪ್ರಮುಖನಿಂದ ಅವನ ತಲೆಯನ್ನು ಒಡೆಯುವ ಮಹತ್ಕಾರ್ಯ ಈ ಹೊಲೆಯನಿಂದಲೇ ನಡೆಯುತ್ತದೆ.

(೨) ಜೇನು ಬಿಡಿಸುವಾಗ ಜೇನುನೊಣ ಕಚ್ಚಬಾರದೆಂದು "ಹೊಲ್ಯಾ ಇದ್ದಿನಿ ಮಾದಗ ಇದ್ದೀನಿ" ಅಂದರೇ ಜೇನುನೊಣ ಕಚ್ಚುದಿವುಲ್ಲವೆಂದು ಪ್ರತೀತಿ ಇದೆ:

(೩) ಯಾದಗಿರಿ ತಾಲ್ಲೂಕಿನಲ್ಲಿ ಮೈಲಾಪುರ ಗ್ರಾಮದಲ್ಲಿ 'ಮಲ್ಲಯ್ಯ' ಎಂಬ ದೇವರಿದ್ದಾನೆ. ದೇವರಗುಡಿ ಸುಮಾರು ಎತ್ತರವಾದ ಗುಡ್ಡದ ಮೇಲೆ ಇದೆ. ಆ ಪರ್ವತದ ತುದಿಯಲ್ಲಿ ಸುಮಾರು ೫೦೦ಅಡಿ ಎತ್ತರವಾದ ಕಲ್ಲು ಬಂಡೆಯಿದೆ. ಅದರ ಮೇಲೆ ರಾತ್ರಿ ಹಗಲು ಉರಿಯುವ ನಂದಾದೀಪ ದೇವರದೀಪ ಇದೆ. ಅದಕ್ಕೆ ಎಣ್ಣೆ ಸುರಿಯಲು ಮೇಲೆ ಹೋಗಲು ಯಾವ ತರದ ದಾರಿಯಿಲ್ಲ. ಆ ಕಲ್ಲನ್ನು ಹತ್ತಬೇಕಾದರೆ ಎಣ್ಣೆ ತುಂಬಿದ ಬಿಂದಿಗೆ ಸರಪಳಿಯ ಸಹಾಯದಿಂದ ಮೇಲೆ ಹತ್ತಿ ಆ ನಂದಾದೀಪಕ್ಕೆ ಎಣ್ಣೆ ಹಾಕಬೇಕು. ಈ ಎಣ್ಣೆ ಬಿಂದಿಗೆ ಮೇಲೆ ಒಯ್ಯುವಾಗ ಸ್ವಲ್ಪೇನಾದರು ಆಯ ತಪ್ಪಿದರೆ ಆ ಎಣ್ಣೆ ಬಿಂದಿಗೆ ಹೊತ್ತವನ ಶರೀರದ ಚೂರುಕೂಡಾ ಸಿಗಲಾರದ ಪರಿಸ್ಥಿತಿಯಿದೆ. ಈ ಮಹತ್ಕಾರ್ಯ ಕೂಡಾ ನೆರವೇರುವುದು ಈ ಹೊಲೆಯರಿಂದಲೇ.

—ಶುಭಾಷ್ ಕಾಂಬ್ಳೆ
ಗುಲ್ಬರ್ಗಾ

ಹೌಸ್ ಜರ್ನಲ್ ಅಲ್ಲ

ಪಂಚಮ ಪತ್ರಿಕೆಯನ್ನು ನಿರಂತರವಾಗಿ ಗಮನಿಸಿದಾಗ ತಟ್ಟನೆ ಹೊಳೆದ ಅನಿಸಿಕೆಯನ್ನು ಅಂದುಬಿಡುತ್ತೇನೆ. ಈ ಪತ್ರಿಕೆ ಯಾರಿಗಾಗಿ ಬರುತ್ತಿದೆ? ಇದು 'ಹೌಸ್ ಜರ್ನಲ್' ಅಲ್ಲ. ಕೇವಲ ದಲಿತರೇ ಬರೆದು ದಲಿತರೇ ಖುಷಿಪಟ್ಟುಕೊಳ್ಳುವ, ಬೆನ್ನು ತಟ್ಟಿಕೊಳ್ಳುವ ತಮಟೆಯಾಗಬಾರದು. ಆದರೆ ಹಾಗೆ ಆದಂತೆ ಭಾಸವಾಗುತ್ತಿದೆಯಲ್ಲ! ಈ ಪತ್ರಿಕೆ ತನ್ನ ದೃಷ್ಟಿಕೋನವನ್ನು ಬದಲಿಸಿಕೊಂಡು; ಸಂಕುಚಿತತ್ವವನ್ನು ವಿಚ್ಛೇದಿಸಿಕೊಂಡು ಸಾರ್ವಜನಿಕ ವೇದಿಕೆಯಾಗಬೇಕು ಎಂಬ ಹಿತೈಷಿಗಳ ಆಶಯವನ್ನು ಈಡೇರಿಸುವತ್ತ ಇದರ ಸಂಪಾದಕವರ್ಗ ಸ್ವಲ್ಪ ಸೀರಿಯಸ್ ಗಮನಕೊಟ್ಟರೆ ಒಳ್ಳೆಯದು.

— ಮಂಗಳೂರು ಚಂದ್ರಕುಮಾರ್

ಗಂಗಯ್ಯನ ಮೇಲೆ ಪೋಲೀಸರ ಹಲ್ಲೆ; ತೀವ್ರ ಖಂಡನೆ

ಅನ್ಯಾಯ ಪ್ರಶ್ನಿಸಿದ ದಲಿತ ಸಂಘರ್ಷ ಸಮಿತಿಯ ಸಂಚಾಲಕ ಎಂ.ಡಿ. ಗಂಗಯ್ಯನವರ ಮೇಲೆ ಚಿಕ್ಕಮಗಳೂರು ಜಿಲ್ಲೆಯ ಸರ್ಕಲ್ ಇನ್ಸಪೆಕ್ಟರ್ ಹೆಚ್.ಎಂ. ಷರೀಫ್ ಎಂಬಾತ ಕೈಮಾಡಿ ಆ ಮೂಲಕ ಜಿಲ್ಲೆಯ ದಲಿತ ಜನಾಂಗದ ಕೋಪಕ್ಕೆ ಒಳಗಾಗಿದ್ದಾನೆ: ಗಂಗಯ್ಯ ಒಬ್ಬ ವ್ಯಕ್ತಿಯಾಗಿರದೆ ನೋವುಂಡೆ ವರ ಪ್ರತಿನಿಧಿ ಎಂಬುದರ ಅರಿವಿಲ್ಲದೆ ಖಾಕಿ ಮದದಿಂದ ಕೈಮಾಡುವಷ್ಟಕ್ಕೆ ಹೋಗಿರುವು ದನ್ನು ಪಂಚಮ ಖಂಡಿಸುತ್ತದೆ. ಮೂಡಿಗೆರೆ ತಾಲ್ಲೂಕು ಹಾಲೂರು ಹುಲ್ಲು ಮನೆ ಭೂಮಿ ಹಂಚುವಿಕೆಯಲ್ಲಿ ದಲಿತರು ವಂಚಿಸಲ್ಪಟ್ಟ ಪ್ರಯುಕ್ತ ಸರ್ಕಾರವೇ ನಿನ್ನ ಕಾನೂನು ಎಲ್ಲಿ ಎಂದು ಕೇಳಲು ಹೋದುದಕ್ಕೇ ಏಟುತಿಂದು ಲಾಕಪ್ಪನಲ್ಲಿರಬೇಕಾಯ್ತು. ಅಧಿಕಾರದ ಈ ನೀಚತನವನ್ನು ಸಿ.ಪಿ.ಐ. ಸಿ.ಪಿ.ಎಂ, ಬಿ.ಜೆ.ಪಿ, ದಲಿತ ಸಂಘರ್ಷಸಮಿತಿ ಖಂಡಿಸಿದೆ. ವಿಚಾರ ಣೆಗೆ ಒತ್ತಾಯಿಸಿದೆ.

ದಲಿತ ಕಲೆಯ ಸೆಲೆ ಚೌಡಿಕೆ ಸುಬ್ಬಯ್ಯ ಹಾಡುತ್ತಾರೆ:

"ನೀವು ಆಡಿಕೊಳ್ಳಲು ಬ್ಯಾಡಿ ಬಡವರ ಬದುಕ"

ಚೌಡಿಕೆ ಸುಬ್ಬಯ್ಯ ಬೆಂಗಳೂರು ಜಿಲ್ಲೆ, ನೆಲ ಮಂಗಲದ ಅಸ್ಪೃಶ್ಯ ವರ್ಗಕ್ಕೆ ಸೇರಿದ ಓರ್ವ ಶ್ರೇಷ್ಠ ಜನಪದ ಗಾಯಕ. ಚೌಡಿಕೆ ಹಿಡಿದು ಹಾಡಲಾರಂಭಿಸಿದರೆ ಇವರ ಕಂಡು ಮೈಲಿಗೆ ಪಡುವ ಜನರ ಮನಸ್ಸಿನಲ್ಲಿ ಗಾಢವಾಗಿ ಸಂಗೀತದ ಸವಿಯನ್ನು ತುಂಬುತ್ತಾರೆ.

ಇಂತಹ ದಲಿತ ಜನಪದ ಗಾಯಕನನ್ನು ೧೯೮೧ ರ ಮಾರ್ಚಿ ತಿಂಗಳಿನಲ್ಲಿ ಆನೇಕಲ್ ಪೇಟೆಯಲ್ಲಿ ಭೇಟಿಮಾಡಿದ್ದೆ.

"ಬರೀ ದೇವರನ್ನೇ ಕುರಿತು ಹಾಡುವ ನಿಮಗೆ ಜಾತಿ–ಭೇದ–ನೋವು ಇಂತಹ ಮೇಲೆ ಜನಪದಗೀತೆ ಇಲ್ಲವೆ" ಎಂದು ಪ್ರಶ್ನಿಸಿದಾಗ "ಅವನ್ನೆಲ್ಲ ಯಾರ್ ಕೇಳ್ತಾರೆ ಸ್ವಾಮಿ ರೆಡಿಯುದಲ್ಲಿ ಹೇಳಕೆ ಹೋದ್ರೆ, ಬೇಡ' ಅಂತರೆ" ಅಂದ 'ಅಂತಹ ಹಾಡಿದ್ದರೆ ಹಾಡಿ' ಎಂದು ಕೇಳಿದಾಗ ಈ ಕೆಳಗಿನ ಹಾಡನ್ನು ಹಾಡುತ್ತಾ ತನ್ನನ್ನು ತಾವೇ ಮರೆತರು.

ಭಿನ್ನಬೇದವ ಮಾಡಬ್ಯಾಡಿರಿ
ಇದರ ಉನ್ನಂತ ತನವನ್ನು ಚೆನ್ನಾಗಿ ಕೇಳಿರಿ
ಭಿನ್ನ ಬೇದವ ಮಾಡಬ್ಯಾಡಿರಿ
ಒಳ್ಳೆ ಹಸ್ಸವನು ಹೊಲೆಯ
ಸುಸ್ವಾದವನು ಚಂಡಾಳ
ನಮ್ಮ ಹಿಂಬಾಗಿ ಕೊಲ್ಲುವ
ಮೈಲಾರಲಿಂಗ ॥ ಭಿನ್ನ ॥
ಮನೆ ಮನೆ ತಿರುಗೋದು ಚೆಕ್ಕು
ಒಳ್ಳೆ ಮಾದಿಗನ ಮನೆಯಲ್ಲಿ ಬಾಡುತಿನ್ನೋದು
ನೋಡು ಚೆಕ್ಕು
ಒಳ್ಳೆ ಹೊಲೆಯನ ಮನೆಯಲ್ಲಿ ಬಾಡುತಿನ್ನೋದು
ನೋಡು ಚೆಕ್ಕು
ಒಳ್ಳೆ ಹಾರುವರ ಮನೆಯಲ್ಲಿ ಕ್ಯಾಮ್ಮಿಗರಮನೆಯಲ್ಲಿ
ಲಿಂಗಾಯಂತರ ಮನೆಯಲ್ಲಿ ಹಾಲು ನೆಕ್ಕೊದು
ನೋಡು ಚೆಕ್ಕು
ಇಂಥ ಸರ್ವಜಾತಿಯೊಳಗೆ ಬೆರ್‍ತೋಗಿರೋದು
ನಮ್ಮ ಆಚಾರವೆಲ್ಲ ॥ ಭಿನ್ನ ॥
ಅಯ್ಯ ಸತ್ತ ಹಸುವಿನ ಚರ್ಮ
ನತ್ತಿಯಲ್ಲಿಳಿಯಾಗಿ ಹೊತ್ತುಕೊಂಡೋಗುವಾಗ
ಮೈನೆನದಿತ್ತಾ
ಸ್ವಾಮಿ ಉತ್ತುರೆ ಮಳೆ ಬಂದು ಸುತ್ತಿ ಸುತ್ತಿ
ಹೊಡೆವಾಗ ನತ್ತಿ ಮೇಗಳ ನೀರು ಬಾಯಿಗಿಳಿದವಲ್ಲೊ॥
ಬಾಯಲ್ಲಿ ಬೆಲ್ಲ ಎದೆಯಲ್ಲಿ ಕತ್ತರಿ
ಅಂತ ಜಾತಿಗನ ಸಂಗ ನೀವು ಸೇರಲುಬ್ಯಾಡ
ನಿಮ್ಮ ಎದುರಿಗೆ ಬರುವಂತ ಶ್ರೀಮಂತರ ಕಂಡು
ಸರ ಸರ ಹಿಂಜರಿಯಬ್ಯಾಡ ॥ ಭಿನ್ನ ॥
ನಮಗೆ ಇಳವಿಲ್ಲ ಸ್ಥಿರವಿಲ್ಲ
ನಂಜಮ್ಮ ಸ್ಥಿರವಿಲ್ಲ
ನೀವು ಪರಜಾತಿ ನಂಬಿ ಕೆಡಬೇಡಿ ಮನುಜ
ನೀವು ಆಡಿಕೊಳ್ಳಲು ಬ್ಯಾಡಿ ಬಡವರ ಬದುಕ
ಕತ್ತಲೆಯ ಬೆಳದಿಂಗಳೊಳಗ ॥ ಭಿನ್ನ ॥

ಚೌಡಿಕೆ ಸುಬ್ಬಯ್ಯನವರು ಹಾಡುತ್ತಾ ಹಾಡುತ್ತಾ ದಲಿತರ ನೋವು ಸಂಕಟಗಳನ್ನೆಲ್ಲ ಹಾಡಿನಲ್ಲಿ ಮೂಡಿಸತೊಡಗಿದರು. ದಲಿತ ತನ್ನನ್ನು ತಾನು ಸಂಪೂರ್ಣವಾಗಿ ವ್ಯಕ್ತಪಡಿಸಿ ಕೊಳ್ಳುವುದಕ್ಕೆ ಸಾಧ್ಯವಾಗುವುದು ತಾನು ಕೈಗೂಡಿಸಿಕೊಂಡ ದಲಿತ ಕಲೆಗಳ ಮೂಲಕ ಮಾತ್ರ ಎಂದು ಗಟ್ಟಿಯಾಗಿ ಅನ್ನಿಸತೊಡಗಿತು.

—ಬಾನಂದೂರು ಕೆಂಪಯ್ಯ

ದಲಿತ ಚಳುವಳಿ ಸಂಶೋಧನೆ

ಮಾನ್ಯರೆ.

ದಲಿತ ಚಳುವಳಿಯು ಭಾರತ ಉಪಖಂಡದ ರಾಜಕೀಯದ ಮೇಲೆ ಆಳವಾದ ಪರಿಣಾಮ ವನ್ನುಂಟುಮಾಡಿದೆ. ಈ ಚಳುವಳಿಯ ಬಗ್ಗೆ ಅಧಿಕಾರಯುತವಾದ ಅಧ್ಯಯನದ ಅವಶ್ಯಕತೆ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಈ ವಿಷಯದ ಬಗ್ಗೆ ಅನೇಕ ಸಂಶೋಧನಾತ್ಮಕ ಪ್ರಬಂಧ, ಲೇಖನಗಳನ್ನು ಪ್ರಕಟಿಸಿರುವ ಡಾ ॥ (ಶ್ರೀಮತಿ) ಗೇಲ್ ಓಮ್‌ವೆಟ್‌ರವರು ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶದ ದಲಿತ ಚಳುವಳಿಗಳ ಬಗ್ಗೆ ಯೋಜನೆಯೊಂದನ್ನು 'ಭಾರತೀಯ ಸಮಾಜ ಶಾಸ್ತ್ರ ಸಂಶೋಧನಾ ಪರಿಷತ್' ಆಶ್ರಯದಲ್ಲಿ ಕೈಗೊಂಡಿದ್ದಾರೆ. ಈ ಸಂಶೋಧನೆಯು ೧೯೨೦ ರಿಂದ ೧೯೮೦ರ ಸಮಯವನ್ನು ಒಳಗೊಂಡಿದೆ.

ಕರ್ನಾಟಕದ ಬಗ್ಗೆ ನಾವು ಸಂಗ್ರಹಾಲಯದ ದಾಖಲೆಗಳು ಮತ್ತು ಕರ್ನಾಟಕಾದ್ಯಂತ ಖಾಸಗಿಯಾಗಿ ದೊರಕಬಹುದಾದ ಕರಪತ್ರಗಳು, ಪತ್ರಿಕೆಗಳು ಇತ್ಯಾದಿಗಳನ್ನು ಉಪಯೋಗಿಸುವ ಉದ್ದೇಶವನ್ನು ಹೊಂದಿದ್ದೇವೆ.

ಅಕಾಡೆಮಿಕ್ ಮತ್ತು ರಾಜಕೀಯ ದೃಷ್ಟಿಯಿಂದ ಈ ಯೋಜನೆಯು ಅಪಾರವಾದ ಪ್ರಾಮುಖ್ಯತೆ ಹೊಂದಿದೆ, ಈ ಸಂಬಂಧದಲ್ಲಿ ಈ ಚಳುವಳಿಯ ಬಗ್ಗೆ ಸಂಬಂಧ ಹೊಂದಿದ್ದ ಹೊಂದಿರುವ ವ್ಯಕ್ತಿಗಳು ತಮ್ಮೊಡನಿರಬಹುದಾದ ದಾಖಲೆಗಳು, ನೆನಪುಗಳು ಮುಂತಾದವನ್ನು ಕೆಳಕಂಡ ವಿಳಾಸಕ್ಕೆ ಕಳಿಸುವುದರ ಮುಖೇನ, ಈ ಪ್ರಯತ್ನವು ಸಫಲವಾಗಲು ಸಹಕರಿಸಬೇಕೆಂದು ಕೋರುತ್ತೇವೆ.

ಡಾ॥ ವಿ. ಲಕ್ಷ್ಮಿನಾರಾಯಣ
ಕುಕ್ಕರ ಹಳ್ಳಿ
ಮೈಸೂರು–570 009

ಮಾನಸಿಕ ಗುಲಾಮಗಿರಿ ವಿರುದ್ಧ

ಜ್ಯೋತಿ ಬಾಫೂಲೆ ಸಮರ

ಸಮಾಜದಲ್ಲಿ ಸಮಾನತೆಯನ್ನು ತರಬೇಕಾದರೆ ಶಿಕ್ಷಣವು ಎಲ್ಲರ ಎದೆಯನ್ನು ತಟ್ಟಲೇಬೇಕೆಂದು ಫೂಲೆ ಚಿಂತಿಸಿದರು. ಹೆಣ್ಣು ಮಕ್ಕಳು ಹಾಗೂ ಅಸ್ಪೃಶ್ಯರಲ್ಲಿಯ ಮಾನಸಿಕ ಗುಲಾಮಗಿರಿಯನ್ನು ಕಿತ್ತೊಗೆಯಲು ಶಿಕ್ಷಣದಿಂದ ಮಾತ್ರ ಸಾಧ್ಯವೆಂದು ಅವರು ನಂಬಿದ್ದರು. ಇಥ ವಿಚಾರಗಳನ್ನು ಬೋಧಿಸುವುದು ಕೂಡಾ ಅಂದಿನ ಕಾಲದಲ್ಲಿ ದೊಡ್ಡ ಅಪರಾಧವಾಗಿತ್ತು. ಆದರೆ ಜೋತಿಬಾ ಎಲ್ಲರನ್ನು ಎದುರುಹಾಕಿಕೊಂಡೂ ಅಳುಕದೆ; ತಮ್ಮ ಗುರಿಯೆಡೆಗೆ ನಡೆದರು. ೧೮೫೧ರ ಜುಲೈ ೩ರಂದು ಜೋತಿಬಾ ಹೆಣ್ಣುಮಕ್ಕಳ ಶಾಲೆಯನ್ನು ಪುಣೆಯಲ್ಲಿ ಶುರುಮಾಡಿಯೇ ಬಿಟ್ಟರು. ಅದನ್ನು ಕೂಡಾ ಬ್ರಾಹ್ಮಣ ಜನದಟ್ಟಣೆಯಿರುವ ಬುಧ್ವಾರ ಪೇಟೆಯ 'ಚಿಪ್ಲಾಂಕರ'ರ ಮನೆಯಲ್ಲಿ ನಡೆಸಹತ್ತಿದರು. ಹೀಗೆ ಬ್ರಾಹ್ಮಣರ ಕುಟಿಲತೆಯ ಮೂಲಬೇರಿಗೇ ಕೈಹಚ್ಚಿದವರಲ್ಲಿ ಅವರು ಮೊದಲಿಗರು. ಹೀಗಾಗಿ ಅತೀದೊಡ್ಡ ಸಂಖ್ಯೆಯಲ್ಲಿ ಅವರನ್ನು ಬ್ರಾಹ್ಮಣರು ವಿರೋಧಿಸಿದರು. ಯಾಕೆಂದರೆ ೩೦೦೦ ವರ್ಷಗಳ ನಂತರ ಮೊದಲಬಾರಿಗೆ ಇಂಥ ಪ್ರಯತ್ನ ಈ ದೇಶದ ಇತಿಹಾಸದಲ್ಲಿ ನಡೆದಿತ್ತು. ಪವಿತ್ರ ದೈವೀಶಕ್ತಿ ಮಂಕಾಗುತ್ತ ನಡೆದಿತ್ತಲ್ಲದೆ ಜನಿವಾರದ ಗಂಟು ಸಡಿಲಾಗ ಹತ್ತಿತ್ತು.

ಶಾಲೆಯನ್ನಂತೂ ಹೇಗೋ ಶುರುಮಾಡಿದ್ದಾಯ್ತು. ಆದರೆ ಅದಕ್ಕೆ ಮೂಲಭೂತವಾಗಿ ಬೇಕಾದ ಶಿಕ್ಷಕರನ್ನು ತರುವುದು ಬಾಫೂಲೆಗೆ ಒಂದು ದೊಡ್ಡ ಸಮಸ್ಯೆಯಾಯಿತು. ಅವರು ತಮ್ಮ ಹೆಂಡತಿ ಸಾವಿತ್ರಿ ಬಾಯಿಯನ್ನು ಕಲಿಸಲು ತಯಾರುಮಾಡಿದರು. ಸಾವಿತ್ರಿಬಾಯಿ ಓಣಿಯಲ್ಲಿ ಹೊರಟರೆ ಸಾಕು, ಪವಿತ್ರಧರ್ಮದ ಪತಿವ್ರತಾ ನಾರಿಯರು ಅವಳತ್ತ ಕಲ್ಲೆಸೆಯುತ್ತಿದ್ದರು. ಹೊಲಸು ಕಂಡು ಹರಿಹರಿ. ಅನ್ನುವವರು ಸಾವಿತ್ರಿ ಬಾಯಿಯೆಡೆಗೆ ಸಗಣೀ ಒಗೆಯುತ್ತಿದ್ದರು. ಸಾವಿತ್ರಿಬಾಯಿ ಇವಕ್ಕೆಲ್ಲಾ ಜಗ್ಗಲಿಲ್ಲ. ಹೀಗಾಗಿ ಸಾವಿತ್ರಿಬಾಯಿ ಫೂಲೆ ಭಾರತದ ಪ್ರಥಮ ಮಹಿಳಾ ಶಿಕ್ಷಕಿಯಾಗಿದ್ದಾಳೆ.

–ತೇಜಸ್ವಿ ಕಟ್ಟೀಮನಿ

ಓದುಗರಿಗೆ ಸೂಚನೆ :

ಜ್ಯೋತಿಬಾಫೂಲೆಯವರ ವ್ಯಕ್ತಿತ್ವ, ಜೀವನ, ಚಳುವಳಿ, ಚಿಂತನೆ ಕುರಿತು ತೇಜಸ್ವಿ ಕಟ್ಟಿಮನಿಯವರು ಬರೆದಿರುವ ಧೀರ್ಘಲೇಖನ ಇಷ್ಟರಲ್ಲೇ ಪುಸ್ತಕ ರೂಪದಲ್ಲಿ ಹೊರಬರಲಿದೆ. ಆದ್ದರಿಂದ ಕಳೆದ ಸಂಚಿಕೆಯಿಂದ ಪ್ರಾರಂಭವಾದ ಫೂಲೆ ಕುರಿತ ಲೇಖನವನ್ನು ಇಷ್ಟಕ್ಕೇ ನಿಲ್ಲಿಸುತ್ತಿದ್ದೇನೆ.

—ಸಂಪಾದಕ

ಕರಾಳ ಹಿಂದೂ ಮನಸ್ಸಿನಿಂದ ಸೋರಿದ ಮುಸ್ಲಿಂ ರಕ್ತದ ಮಾತು

ಮೈಸೂರಿನಿಂದ ಬೆಂಗಳೂರಿಗೆ 'ನಂದಿ' ರೈಲುಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದೆ. ಜನಸಂಖ್ಯೆಯ ಹೆಚ್ಚಳವೋ, ಬಸ್ಸುಗಳ ಕೊರತೆಯೋ ರೈಲುಗಾಡಿ ಉಕ್ಕಿ ಉಗುಳುವಷ್ಟು ಜನರನ್ನು ತುಂಬಿಕೊಂಡಿತ್ತು. ಒಬ್ಬರ ಮೈಗೊಬ್ಬರು ಅಂಟಿಕೊಂಡಿದ್ದಕ್ಕಾಗಿ ಸುಡು ಸುಡು ಬಿಸಿಲಿನ ತಾಪದಿಂದಾಗಿ ಮೈಕೈಗಳಿಂದ ಬೆವರು ಧಾರಾಕಾರವಾಗಿ ಹರಿಯುತ್ತಿತ್ತು.

ರೈಲುಗಾಡಿ ಶ್ರೀರಂಗಪಟ್ಟಣವನ್ನು ಬಿಟ್ಟು ಚಲಿಸುತ್ತಿತ್ತು. ಇದ್ದಕ್ಕಿದ್ದಂತೆ ನಾನು ಕುಳಿತಿದ್ದ ಬೋಗಿಯಲ್ಲಿ ಸಣ್ಣಗಲಭೆಯೊಂದು ಪ್ರಾರಂಭವಾಯಿತು- ಯಾರೋ ಕಿಡಿಗೇಡಿ ಹುಡುಗನೊಬ್ಬ (ವಿದ್ಯಾರ್ಥಿ) ಪ್ರಯಾಣಿಕ ಹೆಂಗಸೊಬ್ಬಳ ಮೊಲೆ ಸವರಿದ್ದಕ್ಕಾಗಿ, ಮೈಮೇಲೆ ಕೈಯಾಡಿಸುತ್ತಿದ್ದರೂ. ನೋಡಿಕೊಂಡು ಸುಮ್ಮನಾಗಲು ಅವಳೇನೂ ಅದೇ ಕಸುಬಿನವಳಾ? ಅಥವಾ ಧ್ವನಿ ತೆಗೆಯಲಾರದ ಬಡಹುಡುಗಿಯೆ? ಅಡಿಯಿಂದ ಮುಡಿಯವರೆವಿಗೂ ಅವಳು ಹಾಕಿಕೊಂಡಿದ್ದ ಆಭರಣಗಳು ಅವಳೊಬ್ಬ ಶ್ರೀಮಂತ ಕುಟುಂಬದವಳೆಂದು ಸಾರಿಹೇಳುತ್ತಿದ್ದವು. ಪಿಸು ಪಿಸು ಮಾತಿನಲ್ಲಿ ಗಂಡನಿಗೆ ತಿಳಿಸಿಬಿಟ್ಟಳು. "ತುಂಬಾ ಜನ ಇದ್ದಾರೆ ಹೋಗಲಿ ಸುಮ್ಮನಿರು" ಎಂದ ಆತ. ಅಷ್ಟಕ್ಕೆ ಆ ಹುಡುಗ ಅವಳ ಒಂದೊಂದೆ ಮೃದು ಭಾಗಗಳನ್ನು ಅಮುಕಲು ಪ್ರಾರಂಭ ಮಾಡಿದ. ಸ್ವಅಕ್ಷದಿಂದಲೇ ವೀಕ್ಷಿಸಿದ ಆಕೆಯ ಗಂಡ "ಸ್ವಲ್ಪ ದೂರ ನಿಂತ್ಕೊಳ್ಳಿ ನಿಮಗೇನು ಮೈಮೇಲೆ ಪ್ರಜ್ಞೆಯಿಲ್ಲವಾ?" ಎಂದ ಬಿಸಿರಕ್ತದ ತರುಣ ಸುಮ್ಮನಾಗಲಿಲ್ಲ. "ನಿನ್ ಹೆಂಡ್ತಿ ಸೀಮೆಗಿಲ್ಲದಿರೊ ಸುಂದರೀನ? "ನಿಮ್ಮಪ್ಪಂದ ರೈಲು" ಎನ್ನುವಷ್ಟು ಮಟ್ಟಿಗೆ ಅವನ ವಾಗ್ವಾದ ಮುಂದುವರೆಯಿತು. ಹೆಂಡ್ತಿ ಮುಂದೆ ಅವಮಾನ ಸಹಿಸದ ಆತನು ದಬಾಯಿಸಿದ. ಕೈ ಕೈ ಮಿಲಾಯಿಸುವ ಮಟ್ಟಕ್ಕಿಳಿದರು

"ಪಾಂಡವಪುರ" ರೈಲುನಿಲ್ದಾಣವನ್ನು ತಲುಪಿದೆವು ಆ ಹುಡುಗ ರೈಲಿನ ಎಲ್ಲಾ ಭೋಗಿಗಳಲ್ಲಿದ್ದ ಹುಡುಗರಿಗೂ ತಿಳಿಸಿಬಿಟ್ಟ. ಹುಡುಗರೆಲ್ಲ ಗುಜುಗುಜು ಮಾತನಾಡಲು ಪ್ರಾರಂಭಿಸಿದರು. ರೈಲು ನಿಲ್ದಾಣವನ್ನು ಬಿಟ್ಟು ಸುಮಾರು ಮುಕ್ಕಾಲು ಮೈಲಿ ಬಂದಿರಬಹುದು. ಅಲಾರಾಂ ಎಳೆದು ರೈಲನ್ನು ನಿಲ್ಲಿಸಲಾಯಿತು. ರೈಲು ನಿಂತಿದ್ದೆ ತಡ ಸುಮಾರು ೫೦–೬೦ ಮಂದಿ ಹುಡುಗರು ಬೆಲ್ಟುಗಳನ್ನಿಡಿದು ದಡದಡ ಎಂದು ನಮ್ಮ ಬೋಗಿಗೆ ಓಡಿಬಂದರು.

"ಬನ್ರಲಾ ! ಯಾವ್ನೊ ಸಾಬಿ ಬಡ್ಡಿಹೈದ ನಮ್ಮುಡ್ಗನಿಗೆ ದಬಾಯ್ಸಿ ತಳ್ಳಾಡವ್ನೆ. ಅದು ಬ್ಯಾರೆ ತುರುಕನ್ನ ಮಗನಂತೆ. ಹಿಂಗೆ ಬಿಟ್ರೆ ನನ್ಮಕ್ಕಳು ದೇಶವೇ ನಮ್ದು ಅಂತಾರೆ" ಅಂದವರೆ ದಬ ದಬ ಆ ವ್ಯಕ್ತಿಯನ್ನು ಬಡಿಯಲಾರಂಭಿಸಿದರು. "ಇವಳೇನ ಅವನ ಹೆಂಡ್ತಿ?" ಎಂದವರೇ ರವಿಕೆ, ಲಂಗದೊಳಗೆ ಸ್ವಲ್ಪ ಜನ ಕೈಯಾ

ಹೆಚ್. ಎಸ್. ರಾಜೇಂದ್ರಸಿಂಗ್
ಹೆಗ್ಗಡದೇವನಕೋಟೆ

ಡಿಸಿಕೊಂಡರು. ಮಕ್ಕಳು ಮರಿಯೆಲ್ಲ ಕಿರ್ರೊಪರ್ರೊ ಅಂತ ಕಿರುಚಾಡುತ್ತಿದ್ದವು. ನಾವು ಎಷ್ಟೊ ಕೈಮುಗಿದು ಬೇಡಿಕೊಂಡರೂ ಅವರ ರೋಷ, ವೇಷ ಕಡಿಮೆಯೇ ಆಗಲಿಲ್ಲ.

"ಈ ಸಾಬಿ ನನ್ಮಕ್ಕಳಿಗೆ ಇಷ್ಟು ಜಂಬ.ನೀವ್ ಸುಮ್ಮನಿರಿ ಸಾರ್" ಎಂದರು "ಸಾಬ್ರುವರ್ಗೆ ಹೊಡಿತಾವ್ರೆ" ಎಂದು ಕಿರುಚಿದ್ದೆ ತಡ ಎಲ್ಲಾ ಭೋಗಿಗಳಲ್ಲಿದ್ದ ಸುಮಾರು ೨೦–೨೫ ಮುಸ್ಲೀಮರು ಹೆಂಗಸರು ಮಕ್ಕಳನ್ನು ಕಟ್ಟಿಕೊಂಡು ಬಸ್ಸು ಸಿಗುವ ಡಾಮರು ರಸ್ತೆಯತ್ತ ಓಡಲು ಪ್ರಾರಂಭಿಸಿದರು.

ಹಾಗೂ ಹೀಗೂ ಗಲಭೆ ನಿಂತು ಹೋಯಿತು. ಇಷ್ಟು ದೊಡ್ಡ ಗಲಾಟೆಗೆ ಮುಖ್ಯ ಕಾರಣ ಅವನು 'ಮುಸ್ಲೀಮ'ನಾಗಿದ್ದುದು, ಹೊಡೆಸಿಕೊಂಡ ಅವನ ಹಣೆಯಲ್ಲಿ ಸೋರಿ ಬರುತ್ತಿದ್ದ ರಕ್ತ ಈ ದೇಶದ ಕರಾಳ ಹಿಂದೂ ಮನಸ್ಸನ್ನು ಸಾರಿ ಹೇಳುತ್ತಿತ್ತು. ಸಾಕಷ್ಟು ಥಳಿಸಿ ಹೊರಬಂದ ಅವರ ಬಾಯಿಂದ ಬರುತ್ತಿದ್ದ ಮಾತುಗಳಿವು:

"ಈ ಸಾಬ್ರು ನನ್ಮಕ್ಕಳಿಗೆ ಎಷ್ಟು ಜಡದ್ರೂ ಬುದ್ಧಿ ಬರಲ್ಲ".

"ಈ ಬಡ್ಡಿ ಹೈಕ ವಲೇರ್, ಮಾದುಗರನ್ನಾ ಬ್ಯಾರೆ ಸೆರೂಸ್ಕೊಂತಾವ್ರೆ".

ಕೊಳಕು ಹಿಂದೂ ಮನಸ್ಸಿನ ಇಂಥ ಕೌರ್ಯದ ವಿರುದ್ಧ ತಮ್ಮ ಮನುಷ್ಯತ್ವದ ರಕ್ಷಣೆಗಾಗಿ ಮುಸ್ಲೀಮರು ಚೂರಿ ಚಾಕುಗಳ ಮೊರೆಹೊಕ್ಕರೆ ಅದು ಎಂದೆಂದೂ ಆಶ್ಚರ್ಯದ ಸಂಗತಿಯಲ್ಲ ಎನ್ನಿಸಿ ಭಾರತಮಾತೆಯ ಭವಿಷ್ಯದ ಬಗ್ಗೆ ಭಯವಾಗತೊಡಗಿತು. ■

ಗಂಗಯ್ಯನ ಮೇಲೆ ಪೋಲೀಸರ ಹಲ್ಲೆ; ತೀವ್ರ ಖಂಡನೆ

ಅನ್ಯಾಯ ಪ್ರಶ್ನಿಸಿದ ದಲಿತ ಸಂಘರ್ಷ ಸಮಿತಿಯ ಸಂಚಾಲಕ ಎಂ.ಡಿ. ಗಂಗಯ್ಯನವರ ಮೇಲೆ ಚಿಕ್ಕಮಗಳೂರು ಜಿಲ್ಲೆಯ ಸರ್ಕಲ್ ಇನ್ಸಪೆಕ್ಟರ್ ಹೆಚ್.ಎಂ. ಷರೀಫ್ ಎಂಬಾತ ಕೈಮಾಡಿ ಆ ಮೂಲಕ ಜಿಲ್ಲೆಯ ದಲಿತ ಜನಾಂಗದ ಕೋಪಕ್ಕೆ ಒಳಗಾಗಿದ್ದಾನೆ: ಗಂಗಯ್ಯ ಒಬ್ಬ ವ್ಯಕ್ತಿಯಾಗಿರದೆ ನೋವುಂಡವರ ಪ್ರತಿನಿಧಿ ಎಂಬುದರ ಅರಿವಿಲ್ಲದೆ ಖಾಕಿ ಮದದಿಂದ ಕೈಮಾಡುವಷ್ಟಕ್ಕೆ ಹೋಗಿರುವುದನ್ನು ಪಂಚಮ ಖಂಡಿಸುತ್ತದೆ. ಮೂಡಿಗೆರೆ ತಾಲ್ಲೂಕು ಹಾಲೂರು ಹುಲ್ಲು ಮನೆ ಭೂಮಿ ಹಂಚುವಿಕೆಯಲ್ಲಿ ದಲಿತರು ವಂಚಿಸಲ್ಪಟ್ಟ ಪ್ರಯುಕ್ತ ಸರ್ಕಾರವೇ ನಿನ್ನ ಕಾನೂನು ಎಲ್ಲಿ ಎಂದು ಕೇಳಲು ಹೋದುದಕ್ಕೇ ಏಟುತಿಂದು ಲಾಕಪ್ಪನಲ್ಲಿರಬೇಕಾಯ್ತು. ಅಧಿಕಾರದ ಈ ನೀಚತನವನ್ನು ಸಿ.ಪಿ.ಐ, ಸಿ.ಪಿ.ಎಂ, ಬಿ.ಜೆ.ಪಿ, ದಲಿತ ಸಂಘರ್ಷಸಮಿತಿ ಖಂಡಿಸಿದೆ. ವಿಚಾರಣೆಗೆ ಒತ್ತಾಯಿಸಿದೆ.

ದಲಿತ ಕಲೆಯ ಸೆಲೆ ಚೌಡಿಕೆ ಸುಬ್ಬಯ್ಯ ಹಾಡುತ್ತಾರೆ:
"ನೀವು ಆಡಿಕೊಳ್ಳಲು ಬ್ಯಾಡಿ ಬಡವರ ಬದುಕ"

ಚೌಡಿಕೆ ಸುಬ್ಬಯ್ಯ ಬೆಂಗಳೂರು ಜಿಲ್ಲೆ. ನೆಲಮಂಗಲದ ಅಸ್ಪೃಶ್ಯ ವರ್ಗಕ್ಕೆ ಸೇರಿದ ಓರ್ವ ಶ್ರೇಷ್ಠ ಜನಪದ ಗಾಯಕ. ಚೌಡಿಕೆ ಹಿಡಿದು ಹಾಡಲಾರಂಭಿಸಿದರೆ ಇವರ ಕಂಡು ಮೈಲಿಗೆ ಪಡುವ ಜನರ ಮನಸ್ಸಿನಲ್ಲಿ ಗಾಢವಾಗಿ ಸಂಗೀತದ ಸವಿಯನ್ನು ತುಂಬುತ್ತಾರೆ.

ಇಂತಹ ದಲಿತ ಜನಪದ ಗಾಯಕನನ್ನು ೧೯೮೧ ರ ಮಾರ್ಚಿ ತಿಂಗಳಿನಲ್ಲಿ ಆನೇಕಲ್ ಪೇಟೆಯಲ್ಲಿ ಭೇಟಿಮಾಡಿದ್ದೆ.

"ಬರೀ ದೇವರನ್ನೇ ಕುರಿತು ಹಾಡುವ ನಿಮಗೆ ಜಾತಿ–ಭೇದ–ನೋವು ಇಂತಹ ಮೇಲೆ ಜನಪದಗೀತೆ ಇಲ್ಲವೆ" ಎಂದು ಪ್ರಶ್ನಿಸಿದಾಗ "ಅವನ್ನೆಲ್ಲ ಯಾರ್ ಕೇಳ್ತಾರೆ ಸ....ರೆಡಿಯುದಲ್ಲಿ ಹೇಳಕೆ ಹೋದ್ರೆ ಬೇಡ ಅಂತರೆ" ಅಂದ 'ಅಂತಹ ಹಾಡಿದ್ದರೆ ಹಾಡಿ' ಎಂದು ಕೇಳಿದಾಗ ಈ ಕೆಳಗಿನ ಹಾಡನ್ನು ಹಾಡುತ್ತಾ ತನ್ನನ್ನು ತಾವೇ ಮರೆತರು.

ಭಿನ್ನಬೇದವ ಮಾಡಬ್ಯಾಡಿರಿ
ಇದರ ಉನ್ನಂತ ತನವನ್ನು ಚೆನ್ನಾಗಿ ಕೇಳಿರಿ
ಭಿನ್ನ ಬೇದವ ಮಾಡಬ್ಯಾಡಿರಿ
ಒಳ್ಳೆ ಹಸ್ದವನು ಹೊಲೆಯ
ಸುಸ್ತಾದವನು ಚಂಡಾಳ
ನಮ್ಮ ಹಿಂಬಾಗಿ ಕೊಲ್ಲುವ
ಮೈಲಾರಲಿಂಗ ॥ ಭಿನ್ನ ॥
ಮನೆ ಮನೆ ತಿರುಗೊದು ಬೆಕ್ಕು
ಒಳ್ಳೆ ಮಾದಿಗನ ಮನೆಯಲ್ಲಿ ಬಾಡುತಿನ್ನೊದು
ನೋಡು ಬೆಕ್ಕು
ಒಳ್ಳೆ ಹೊಲೆಯನ ಮನೆಯಲ್ಲಿ ಬಾಡುತಿನ್ನೊದು
ನೋಡು ಬೆಕ್ಕು
ಒಳ್ಳೆ ಹಾರುವರ ಮನೆಯಲ್ಲಿ ಕ್ಯಾಮ್ಯಿಗರಮನೆಯಲ್ಲಿ
ಲಿಂಗಾಯಂತರ ಮನೆಯಲ್ಲಿ ಹಾಲು ನೆಕ್ಕೊದು
ನೋಡು ಬೆಕ್ಕು
ಇಂಥ ಸರ್ವಜಾತಿಯೊಳಗೆ ಬೆರ್‍ತೋಗಿರೋದು
ನಮ್ಮ ಆಚಾರವೆಲ್ಲ ' ॥ ಭಿನ್ನ ॥

ಅಯ್ಯ ಸತ್ತ ಹಸುವಿನ ಚರ್ಮ
ನೆತ್ತಿಯಲ್ಲಿಳಿಯಾಗಿ ಹೊತ್ತುಕೊಂಡೋಗುವಾಗ
ಮೈನೆನದಿತ್ತಾ
ಸ್ವಾಮಿ ಉತ್ತುರೆ ಮಳೆ ಬಂದು ಸುತ್ತಿ ಸುತ್ತಿ
ಹೊಡೆವಾಗ ನೆತ್ತಿ ಮೇಗಳ ನೀರು ಬಾಯಿಗಿಳಿದವಲ್ಲೊ॥

ಬಾಯಲ್ಲಿ ಬೆಲ್ಲ ಎದೆಯಲ್ಲಿ ಕತ್ತರಿ
ಅಂತ ಜಾತಿಗನ ಸಂಗ ನೀವು ಸೇರಲುಬ್ಯಾಡ
ನಿಮ್ಮ ಎದುರಿಗೆ ಬರುವಂತ ಶ್ರೀಮಂತರ ಕಂಡು
ಸರ ಸರ ಹಿಂಜರಿಯಬ್ಯಾಡ ॥ ಭಿನ್ನ ॥

ನಮಗೆ ಇರವಿಲ್ಲ ಸ್ಥಿರವಿಲ್ಲ
ನಂಜಮ್ಮ ಸ್ಥಿರವಿಲ್ಲ
ನೀವು ಪರಜಾತಿ ನಂಬಿ ಕೆಡಬೇಡಿ ಮನುಜ
ನೀವು ಆಡಿಕೊಳ್ಳಲು ಬ್ಯಾಡಿ ಬಡವರ ಬದುಕ
ಕತ್ತಲೆಯ ಬೆಳದಿಂಗಳೊಳಗ ॥ ಭಿನ್ನ ॥

ಚೌಡಿಕೆ ಸುಬ್ಬಯ್ಯನವರು ಹಾಡುತ್ತಾ ಹಾಡುತ್ತಾ ದಲಿತರ ನೋವು ಸಂಕಟಗಳನ್ನೆಲ್ಲ ಹಾಡಿನಲ್ಲಿ ಮೂಡಿಸತೊಡಗಿದರು. ದಲಿತ ತನ್ನನ್ನು ತಾನು ಸಂಪೂರ್ಣವಾಗಿ ವ್ಯಕ್ತಪಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದು ತಾನು ಹೈಗೂಡಿಸಿಕೊಂಡ ದಲಿತ ಕಲೆಗಳ ಮೂಲಕ ಮಾತ್ರ ಎಂದು ಗಟ್ಟಿಯಾಗಿ ಅನ್ನಿಸತೊಡಗಿತು.

—ಬಾನಂದೂರು ಕೆಂಪಯ್ಯ

ದಲಿತ ಚಳುವಳಿ ಸಂಶೋಧನೆ

ಮಾನ್ಯರೆ.

ದಲಿತ ಚಳುವಳಿಯು ಭಾರತ ಉಪಖಂಡದ ರಾಜಕೀಯದ ಮೇಲೆ ಆಳವಾದ ಪರಿಣಾಮವನ್ನುಂಟುಮಾಡಿದೆ. ಈ ಚಳುವಳಿಯ ಬಗ್ಗೆ ಅಧಿಕಾರಯುತವಾದ ಅಧ್ಯಯನದ ಅವಶ್ಯಕತೆ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಈ ವಿಷಯದ ಬಗ್ಗೆ ಅನೇಕ ಸಂಶೋಧನಾತ್ಮಕ ಪ್ರಬಂಧ, ಲೇಖನಗಳನ್ನು ಪ್ರಕಟಿಸಿರುವ ಡಾ ॥ (ಶ್ರೀಮತಿ) ಗೇಲ್ ಓಮ್‌ವೆಟ್‌ರವರು ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶದ ದಲಿತ ಚಳುವಳಿಗಳ ಬಗ್ಗೆ ಯೋಜನೆಯೊಂದನ್ನು 'ಭಾರತೀಯ ಸಮಾಜ ಶಾಸ್ತ್ರ ಸಂಶೋಧನಾ ಪರಿಷತ್' ಆಶ್ರಯದಲ್ಲಿ ಕೈಗೊಂಡಿದ್ದಾರೆ. ಈ ಸಂಶೋಧನೆಯು ೧೯೨೫ ರಿಂದ ೧೯೮೦ರ ಸಮಯವನ್ನು ಒಳಗೊಂಡಿದೆ.

ಕರ್ನಾಟಕದ ಬಗ್ಗೆ ನಾವು ಸಂಗ್ರಹಾಲಯದ ದಾಖಲೆಗಳು ಮತ್ತು ಕರ್ನಾಟಕಾದ್ಯಂತ ಖಾಸಗಿಯಾಗಿ ದೊರಕಬಹುದಾದ ಕರಪತ್ರಗಳು, ಪತ್ರಿಕೆಗಳು ಇತ್ಯಾದಿಗಳನ್ನು ಉಪಯೋಗಿಸುವ ಉದ್ದೇಶವನ್ನು ಹೊಂದಿದ್ದೇವೆ.

ಅಕಾಡೆಮಿಕ್ ಮತ್ತು ರಾಜಕೀಯ ದೃಷ್ಟಿಯಿಂದ ಈ ಯೋಜನೆಯು ಅಪಾರವಾದ ಪ್ರಾಮುಖ್ಯತೆ ಹೊಂದಿದೆ, ಈ ಸಂಬಂಧದಲ್ಲಿ ಈ ಚಳುವಳಿಯ ಬಗ್ಗೆ ಸಂಬಂಧ ಹೊಂದಿದ್ದ ಹೊಂದಿರುವ ವ್ಯಕ್ತಿಗಳು ತಮ್ಮೊಡನಿರಬಹುದಾದ ದಾಖಲೆಗಳು, ನೆನಪುಗಳು ಮುಂತಾದವನ್ನು ಕೆಳಕಂಡ ವಿಳಾಸಕ್ಕೆ ಕಳಿಸುವುದರ ಮುಖೇನ, ಈ ಪ್ರಯತ್ನವು ಸಫಲವಾಗಲು ಸಹಕರಿಸಬೇಕೆಂದು ಕೋರುತ್ತೇವೆ.

ಡಾ॥ ವಿ. ಲಕ್ಷ್ಮಿನಾರಾಯಣ
ಕುಕ್ಕರ ಹಳ್ಳಿ
ಮೈಸೂರು–570 009

ಮಾನಸಿಕ ಗುಲಾಮಗಿರಿ ವಿರುದ್ಧ

ಜ್ಯೋತಿ ಬಾಫೂಲೆ ಸಮರ

ಸಮಾಜದಲ್ಲಿ ಸಮಾನತೆಯನ್ನು ತರಬೇಕಾದರೆ ಶಿಕ್ಷಣವು ಎಲ್ಲರ ಎದೆಯನ್ನು ತಟ್ಟಲೇಬೇಕೆಂದು ಫೂಲೆ ಚಿಂತಿಸಿದರು. ಹೆಣ್ಣುಮಕ್ಕಳು ಹಾಗೂ ಅಸ್ಪೃಶ್ಯರಲ್ಲಿಯ ಮಾನಸಿಕ ಗುಲಾಮಗಿರಿಯನ್ನು ಕಿತ್ತೊಗೆಯಲು ಶಿಕ್ಷಣದಿಂದ ಮಾತ್ರ ಸಾಧ್ಯವೆಂದು ಅವರು ನಂಬಿದ್ದರು. ಇಂಥ ವಿಚಾರಗಳನ್ನು ಬೋಧಿಸುವುದು ಕೂಡಾ ಅಂದಿನ ಕಾಲದಲ್ಲಿ ದೊಡ್ಡ ಅಪರಾಧವಾಗಿತ್ತು. ಆದರೆ ಜೋತಿಬಾ ಎಲ್ಲರನ್ನು ಎದುರುಹಾಕಿಕೊಂಡೂ ಅಳುಕದೆ; ತಮ್ಮ ಗುರಿಯೆಡೆಗೆ ನಡೆದರು. ೧೮೫೧ರ ಜುಲೈ ೩ರಂದು ಜೋತಿಬಾ ಹೆಣ್ಣುಮಕ್ಕಳ ಶಾಲೆಯನ್ನು ಪುಣೆಯಲ್ಲಿ ಶುರುಮಾಡಿಯೇ ಬಿಟ್ಟರು. ಅದನ್ನು ಕೂಡಾ ಬ್ರಾಹ್ಮಣ ಜನದಟ್ಟಣೆಯಿರುವ ಬುಧ್ವಾರ ಪೇಟೆಯ 'ಚಿಪ್ಲಾಂಕರ'ರ ಮನೆಯಲ್ಲಿ ನಡೆಸಹತ್ತಿದರು. ಹೀಗೆ ಬ್ರಾಹ್ಮಣರ ಕುಟಿಲತೆಯ ಮೂಲಬೇರಿಗೇ ಕೈಹಚ್ಚಿದವರಲ್ಲಿ ಅವರು ಮೊದಲಿಗರು. ಹೀಗಾಗಿ ಅತೀದೊಡ್ಡ ಸಂಖ್ಯೆಯಲ್ಲಿ ಅವರನ್ನು ಬ್ರಾಹ್ಮಣರು ವಿರೋಧಿಸಿದರು. ಯಾಕೆಂದರೆ ೩೦೦೦ ವರ್ಷಗಳ ನಂತರ ಮೊದಲಬಾರಿಗೆ ಇಂಥ ಪ್ರಯತ್ನ ಈ ದೇಶದ ಇತಿಹಾಸದಲ್ಲಿ ನಡೆದಿತ್ತು. ಪವಿತ್ರ ದೈವೀಶಕ್ತಿ ಮಂಕಾಗುತ್ತ ನಡೆದಿತ್ತಲ್ಲದೆ ಜನಿವಾರದ ಗಂಟು ಸಡಿಲಾಗ ಹತ್ತಿತ್ತು.

ಶಾಲೆಯನ್ನಂತೂ ಹೇಗೋ ಶುರುಮಾಡಿದ್ದಾಯ್ತು. ಆದರೆ ಅದಕ್ಕೆ ಮೂಲಭೂತವಾಗಿ ಬೇಕಾದ ಶಿಕ್ಷಕರನ್ನು ತರುವುದು ಬಾಫೂಲೆಗೆ ಒಂದು ದೊಡ್ಡ ಸಮಸ್ಯೆಯಾಯಿತು. ಅವರು ತಮ್ಮ ಹೆಂಡತಿ ಸಾವಿತ್ರಿ ಬಾಯಿಯನ್ನು ಕಲಿಸಲು ತಯಾರುಮಾಡಿದರು. ಸಾವಿತ್ರಿಬಾಯಿ ಓಣಿಯಲ್ಲಿ ಹೊರಟರೆ ಸಾಕು, ಪವಿತ್ರಧರ್ಮದ ಪತಿವ್ರತಾ ನಾರಿಯರು ಅವಳತ್ತ ಕಲ್ಲೆಸೆಯುತ್ತಿದ್ದರು. ಹೊಲಸು ಕಂಡು ಹರಿಹರಿ ಅನ್ನುವವರು ಸಾವಿತ್ರಿ ಬಾಯಿಯೆಡೆಗೆ ಸಗಣೀ ಒಗೆಯುತ್ತಿದ್ದರು. ಸಾವಿತ್ರಿಬಾಯಿ ಇವಕ್ಕೆಲ್ಲಾ ಜಗ್ಗಲಿಲ್ಲ. ಹೀಗಾಗಿ ಸಾವಿತ್ರಿಬಾಯಿ ಫೂಲೆ ಭಾರತದ ಪ್ರಥಮ ಮಹಿಳಾ ಶಿಕ್ಷಕಿಯಾಗಿದ್ದಾಳೆ.

–ತೇಜಸ್ವಿ ಕಟ್ಟೀಮನಿ

ಓದುಗರಿಗೆ ಸೂಚನೆ:

ಜ್ಯೋತಿಬಾಫೂಲೆಯವರ ವ್ಯಕ್ತಿತ್ವ, ಜೀವನ, ಚಳುವಳಿ, ಚಿಂತನೆ ಕುರಿತು ತೇಜಸ್ವಿ ಕಟ್ಟಿಮನಿಯವರು ಬರೆದಿರುವ ಧೀರ್ಘಲೇಖನ ಇಷ್ಟರಲ್ಲೇ ಪುಸ್ತಕ ರೂಪದಲ್ಲಿ ಹೊರಬರಲಿದೆ. ಆದ್ದರಿಂದ ಕಳೆದ ಸಂಚಿಕೆಯಿಂದ ಪ್ರಾರಂಭವಾದ ಫೂಲೆ ಕುರಿತ ಲೇಖನವನ್ನು ಇಷ್ಟಕ್ಕೇ ನಿಲ್ಲಿಸುತ್ತಿದ್ದೇನೆ.

—ಸಂಪಾದಕ

ಕರಾಳ ಹಿಂದೂ ಮನಸ್ಸಿನಿಂದ ಸೋರಿದ ಮುಸ್ಲಿಂ ರಕ್ತದ ಮಾತು

ಮೈಸೂರಿನಿಂದ ಬೆಂಗಳೂರಿಗೆ 'ನಂದಿ' ರೈಲುಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದೆ. ಜನಸಂಖ್ಯೆಯ ಹೆಚ್ಚಳವೋ, ಬಸ್ಸುಗಳ ಕೊರತೆಯೋ ರೈಲುಗಾಡಿ ಉಕ್ಕಿ ಉಗುಳುವಷ್ಟು ಜನರನ್ನು ತುಂಬಿಕೊಂಡಿತ್ತು. ಒಬ್ಬರ ಮೈಗೊಬ್ಬರು ಅಂಟಿಕೊಂಡಿದ್ದಕ್ಕಾಗಿ ಸುಡು ಸುಡು ಬಿಸಿಲಿನ ತಾಪದಿಂದಾಗಿ ಮೈಕೈಗಳಿಂದ ಬೆವರು ಧಾರಾಕಾರವಾಗಿ ಹರಿಯುತ್ತಿತ್ತು.

ರೈಲುಗಾಡಿ ಶ್ರೀರಂಗಪಟ್ಟಣವನ್ನು ಬಿಟ್ಟು ಚಲಿಸುತ್ತಿತ್ತು. ಇದ್ದಕ್ಕಿದ್ದಂತೆ ನಾನು ಕುಳಿತಿದ್ದ ಬೋಗಿಯಲ್ಲಿ ಸಣ್ಣಗಲಭೆಯೊಂದು ಪ್ರಾರಂಭವಾಯಿತು- ಯಾರೋ ಕಿಡಿಗೇಡಿ ಹುಡುಗನೊಬ್ಬ (ವಿದ್ಯಾರ್ಥಿ) ಪ್ರಯಾಣಿಕ ಹೆಂಗಸೊಬ್ಬಳ ಮೊಲೆ ಸವರಿದ್ದಕ್ಕಾಗಿ, ಮೈಮೇಲೆ ಕೈಯಾಡಿಸುತ್ತಿದ್ದರೂ. ನೋಡಿಕೊಂಡು ಸುಮ್ಮನಾಗಲು ಅವಳೇನೂ ಅದೇ ಕಸುಬಿನವಳಾ? ಅಥವಾ ಧ್ವನಿ ತೆಗೆಯಲಾರದ ಬಡಹುಡುಗಿಯೆ? ಅಡಿಯಿಂದ ಮುಡಿಯವರೆವಿಗೂ ಅವಳು ಹಾಕಿಕೊಂಡಿದ್ದ ಆಭರಣಗಳು ಅವಳೊಬ್ಬ ಶ್ರೀಮಂತ ಕುಟುಂಬದವಳೆಂದು ಸಾರಿಹೇಳುತ್ತಿದ್ದವು. ಪಿಸು ಪಿಸು ಮಾತಿನಲ್ಲಿ ಗಂಡನಿಗೆ ತಿಳಿಸಿಬಿಟ್ಟಳು. "ತುಂಬಾ ಜನ ಇದ್ದಾರೆ ಹೋಗಲಿ ಸುಮ್ಮನಿರು" ಎಂದ ಆತ. ಅಷ್ಟಕ್ಕೆ ಆ ಹುಡುಗ ಅವಳ ಒಂದೊಂದೆ ಮೃದು ಭಾಗಗಳನ್ನು ಅಮುಕಲು ಪ್ರಾರಂಭ ಮಾಡಿದ. ಸ್ವಅಕ್ಷದಿಂದಲೇ ವೀಕ್ಷಿಸಿದ ಆಕೆಯ ಗಂಡ "ಸ್ವಲ್ಪ ದೂರ ನಿಂತ್ಕೊಳ್ಳಿ ನಿಮಗೇನು ಮೈಮೇಲೆ ಪ್ರಜ್ಞೆಯಿಲ್ಲವಾ?" ಎಂದ ಬಿಸಿರಕ್ತದ ತರುಣ ಸುಮ್ಮನಾಗಲಿಲ್ಲ. "ನಿನ್ ಹೆಂಡ್ತಿ ಸೀಮೆಗಿಲ್ಲದಿರೊ ಸುಂದರೀನ? "ನಿಮ್ಮಪ್ಪಂದ ರೈಲು" ಎನ್ನುವಷ್ಟು ಮಟ್ಟಿಗೆ ಅವನ ವಾಗ್ವಾದ ಮುಂದುವರಿಯಿತು. ಹೆಂಡ್ತಿ ಮುಂದೆ ಅವಮಾನ ಸಹಿಸದ ಆತನು ದಬಾಯಿಸಿದ. ಕೈ ಕೈ ಮಿಲಾಯಿಸುವ ಮಟ್ಟಕ್ಕಿಳಿದರು

"ಪಾಂಡವಪುರ" ರೈಲುನಿಲ್ದಾಣವನ್ನು ತಲುಪಿದೊ ಆ ಹುಡುಗ ರೈಲಿನ ಎಲ್ಲಾ ಭೋಗಿಗಳಲ್ಲಿದ್ದ ಹುಡುಗರಿಗೂ ತಿಳಿಸಿಬಿಟ್ಟ. ಹುಡುಗರೆಲ್ಲ ಗುಜುಗುಜು ಮಾತನಾಡಲು ಪ್ರಾರಂಭಿಸಿದರು. ರೈಲು ನಿಲ್ದಾಣವನ್ನು ಬಿಟ್ಟು ಸುಮಾರು ಮುಕ್ಕಾಲು ಮೈಲಿ ಬಂದಿರಬಹುದು ಅಲಾರಾಂ ಎಳೆದು ರೈಲನ್ನು ನಿಲ್ಲಿಸಲಾಯಿತು. ರೈಲು ನಿಂತಿದ್ದೆ ತಡ ಸುಮಾರು ೫೦–೬೦ ಮಂದಿ ಹುಡುಗರು ಬೆಲ್ಟುಗಳನ್ನಿಡಿದು ದಡದಡ ಎಂದು ನಮ್ಮ ಬೋಗಿಗೆ ಓಡಿಬಂದರು.

"ಬನ್ರಲಾ! ಯಾವ್ನೊ ಸಾಬಿ ಬಡ್ಡಿಹೈದ ನಮ್ಮುಡ್ಗನಿಗೆ ದಬಾಯ್ಸಿ ತಳ್ಳಾಡವ್ನೆ. ಅದು ಬ್ಯಾರೆ ತುರುಕ ನನ್ಮಗನಂತೆ. ಹಿಂಗೆ ಬಿಟ್ರೆ ನನ್ಮಕ್ಕಳು ದೇಶವೇ ನಮ್ದು ಅಂತಾರೆ" ಅಂದವರೆ ದಬ ದಬ ಆ ವ್ಯಕ್ತಿಯನ್ನು ಬಡಿಯಲಾರಂಭಿಸಿದರು. "ಇವಳೇನ ಅವನ ಹೆಂಡ್ತಿ?" ಎಂದವರೇ ರವಿಕೆ, ಲಂಗದೊಳಗೆ ಸ್ವಲ್ಪ ಜನ ಕೈಯಾ

ಹೆಚ್. ಎಸ್. ರಾಜೇಂದ್ರಸಿಂಗ್
ಹೆಗ್ಗಡದೇವನಕೋಟೆ

ಡಿಸಿಕೊಂಡರು. ಮಕ್ಕಳು ಮರಿಯೆಲ್ಲ ಕಿರೊಪರೊ ಅಂತ ಕಿರುಚಾಡುತ್ತಿದ್ದವು. ನಾವು ಎಷ್ಟೊ ಕೈಮುಗಿದು ಬೇಡಿಕೊಂಡರೂ ಅವರ ರೋಷ, ವೇಷ ಕಡಿಮೆಯೇ ಆಗಲಿಲ್ಲ.

"ಈ ಸಾಬಿ ನನ್ಮಕ್ಕಳಿಗೆ ಇಷ್ಟು ಜಂಬ,ನೀವ್ ಸುಮ್ನಿರಿ ಸಾರ್" ಎಂದರು "ಸಾಬ್ರುವರ್ಗ ಹೊಡಿತಾವ್ರೆ" ಎಂದು ಕಿರುಚಿದ್ದೆ ತಡ ಎಲ್ಲಾ ಭೋಗಿಗಳಲ್ಲಿದ್ದ ಸುಮಾರು ೨೦–೨೫ ಮುಸ್ಲೀಮರು ಹೆಂಗಸರು ಮಕ್ಕಳನ್ನು ಕಟ್ಟಿಕೊಂಡು ಬಸ್ಸು ಸಿಗುವ ಡಾಮರು ರಸ್ತೆಯತ್ತ ಓಡಲು ಪ್ರಾರಂಭಿಸಿದರು.

ಹಾಗೂ ಹೀಗೂ ಗಲಭೆ ನಿಂತು ಹೋಯಿತು ಇಷ್ಟು ದೊಡ್ಡ ಗಲಾಟೆಗೆ ಮುಖ್ಯ ಕಾರಣ ಅವನು 'ಮುಸ್ಲೀಮ'ನಾಗಿದ್ದುದು. ಹೊಡೆಸಿಕೊಂಡ ಅವನ ಹಣೆಯಲ್ಲಿ ಸೋರಿ ಬರುತ್ತಿದ್ದ ರಕ್ತ ಈ ದೇಶದ ಕರಾಳ ಹಿಂದೂ ಮನಸ್ಸನ್ನು ಸಾರಿ ಹೇಳುತ್ತಿತ್ತು. ಸಾಕಷ್ಟು ಥಳಿಸಿ ಹೊರಟುಹೋದ ಅವರ ಬಾಯಿಂದ ಬರುತ್ತಿದ್ದ ಮಾತುಗಳಿವು:

"ಈ ಸಾಬ್ರು ನನ್ಮಕ್ಕಳಿಗೆ ಎಷ್ಟು ಜಡದ್ರೂ ಬುದಿ.. ಬರಲ್ಲ".

"ಈ ಬ್ಡಿ ಹೈಕ ವಲೇರ್, ಮಾದುಗರನ್ನ ಬ್ಯಾರೆ ಸೆರೂಸ್ಕೊತಾವ್ರೆ".

ಕೊಳಕು ಹಿಂದೂ ಮನಸ್ಸಿನ ಇಂಥ ಕೌರ್ಯದ ವಿರುದ್ಧ ತಮ್ಮ ಮನುಷ್ಯತ್ವದ ರಕ್ಷಣೆಗಾಗಿ ಮುಸ್ಲೀಮರು ಚೂರಿ ಚಾಕುಗಳ ಮೊರೆಹೊಕ್ಕರೆ ಅದು ಎಂದೆಂದೂ ಆಶ್ಚರ್ಯದ ಸಂಗತಿಯಲ್ಲ ಎನ್ನಿಸಿ ಭಾರತಮಾತೆಯ ಭವಿಷ್ಯದ ಬಗ್ಗೆ ಭಯವಾಗತೊಡಗಿತು.

ಸೂರ್ಯಚಂದ್ರರೇ ಸಾಕ್ಷಿ

ಕತ್ತಲೊಡನೆ ಮುಖಕತೆ

ಮೂರು ನಾಯಿಗಳು, ಒಬ್ಬ ಮನುಷ್ಯ ಒಂದು ಎಂಜಲು ಎಲೆಯ ಸುತ್ತ ಹಂಚಿಕಡ್ಡಿ ಸಂದಿಗೆ, ಎಲೆಗೆ ಅಂಟಿಕೊಂಡಿದ್ದ ಅನ್ನದ ಅಗಳಿಗಾಗಿ ಯತ್ನ ನಡೆಸುತ್ತಿದ್ದೊ. ಆಗ ಸೂರ್ಯ ನತ್ತಿಯಮೇಲೆ ಉರಿಯುತ್ತಿದ್ದ. ಆ ಮನುಷ್ಯನ ತಗಲೂಪಿ, ದಬಾವಣೆಯಿಂದಾಗಿ ನಾಯಿಗಳಿಗೆ ಮೋಸ ಆಗಿತ್ತು. ಎಂಜಲು ಎಲೆಯ ವಾರಸುದಾರನ ಮಗ ನನ್ನ ಜತೆ ಬಿ.ಎ. ಓದುತ್ತಿದ್ದ ಹುಡುಗ. ಅವನ ಅಪ್ಪ ಗ್ಯಾನ ತಪ್ಪಿದವನೆಂದು ಅವ್ವ ಬೇರೆಯವನ ಜತೆ ಸಂಸಾರ ಮಾಡಿಕೊಂಡು ಮಗನನ್ನೂ ಓದಿಸುತ್ತಿದ್ದಳು. 'ನಿಮ್ಮ ಊರಿಗೆ ನಾನು ಬರಬೇಕೆಂದು ಜತೆಗಾರನನ್ನು ಒತ್ತಾಯಿಸಿದೆ. 'ನನ್ನ ಊರು ಒಂದು ಹಳ್ಳಿ. ಅತ್ಲೆಲ್ಲ ಅನಾಗರೀಕತೆ, ನಿಮ್ಮಂಥವರು ಯಾಕೆ ಬರ್ತೀರ? ಎಂದು ಬಾಯಿ ಮುಚ್ಚಿಸಿದ್ದ. ನನ್ನ ಜತೆ ಒಂದೇತಟ್ಟೆಯಲ್ಲಿ ಊಟಮಾಡಲು ಅಂಜುತ್ತಿದ್ದ ಅವನು ನಾನು ಒಂದೇ ಹಾಸ್ಟಲ್‌ನಲ್ಲಿದ್ದೆವು. 'ನಿಮ್ಮಪ್ಪವ್ರು ನಮಗೆ ನೆಂಟ್ರು ಅಂತ ನಮ್ಮವ್ವ ಹೇಳುತ್ತಾಳೆಂದು ಆಗಾಗ ನೆನಪಿಸುತ್ತಿದ್ದ. ಅಂಗಾದ್ರೆ ನಮ್ಮೂರಿಗೆ ಬಾ ಎಂದು ಕರೆದರೆ 'ನಾವು ನಿಮ್ಮ ಮನೆಗೆ ಬರಂಗಿಲ್ಲ' ವೆಂದು ನಾಚಿಕೊಳ್ಳುವುದು ಅವನ ಸ್ವಭಾವ. ಅವನನ್ನು ಬಿಡದೆ ಒಂದು ದಿನ ಕರೆದುಕೊಂಡೆ ಹೋದೆ. ಊರು ತಲುಪಿದಾಗ ಆಕಾಶ ಸೂರ್ಯನನ್ನು ನುಂಗುತ್ತಿತ್ತು.

ಮನೆಯ ಮುಂದಿನ ಜಗಲಿಯಮೇಲೆ ಒಬ್ಬ ಕೂತು ಕೊಂಬುಕೊಯ್ಯುತ್ತಿದ್ದನು. ನಾವು ಅಲ್ಲೆ ಕೂತೆೊ. ಅದು ದಕ್ಲೋರ ರಾಮಯ್ಯ ಎಮ್ಮೆ ಕೊಂಬಿನಿಂದ ಚಿತ್ರಗಳನ್ನು ಮಾಡುತ್ತಿದ್ದ ಕೆಲಸ. ಪಕ್ಕದಲ್ಲೆ ಕೂತ ಜತೆಗಾರ ಮೂರ್ಛೆ ಬಿದ್ದವನಂತೆ ಕೂತ. ರಾಮಯ್ಯ ನನ್ನ ನೋಡಿದವನಂತೆ 'ಏನಣ್ಣ ಬಂದ್ಯಾ' ಅಂದನು. ಆ ಹುಡುಗನ ಕಡೆ ನೋಡಿ ಸಣ್ಣಮಗುವಿನಂತೆ ಹೆತ್ತತಾಯಿಯಂತೆ ಕಣ್ಣೀರು ಸುರಿಸಿದ. ಕಣ್ಣುಮುಚ್ಚಿಕೂತ ಹುಡುಗನ ಬಟ್ಟೆ ಇದ್ದಕ್ಕಿದ್ದಂತೆ ವದ್ದೆಯಾಗಿತ್ತು. ಮಾತಾಡಿಸಲು ಭಯ ಎಂದು ಕೂತೆ: 'ಇವ್ನು ನನ್ನಮಗ ಸ್ವಾಮಿ, ಹತ್ತು ವರ್ಷದ ಹಿಂದೆ ಮನೆಬಿಟ್ಟು ತಾಯಿ ಜತೆ ಹೋದ. ಈಗ ಮಕ ತೋರಿಸ್ತಾನೆ ನಾನ್ ಏನಂತ ಅಪರಾಧ ಮಾಡಿದ್ದೆ?' ಎಂದು ಕಣ್ಣೀರು ವರಸಿಕೊಂಡ. 'ಏನಪ್ಪಾ' ಇಲ್ಗೆ ಯಾವಾಗ ಬಂದೆ' ಎಂದು ಹಲ್ಲುಮುಡಿ ಕಚ್ಚಿ ಕಣ್ಣೀರು ತಡೆದು ಮಾತಾಡಿ ಪರಿಚಯ ಮಾಡಿಕೊಂಡರು. ಇದು ಮನೆಯವರಿಗೆಲ್ಲಾ ಗೊತ್ತಾಯ್ತು. ಅಷ್ಟೊತ್ತಿಗೆ ಚಂದ್ರ ಹುಟ್ಟಿ ಮೇಲೆ ಬರುತ್ತಿದ್ದ.

ದಕ್ಲೋರ್ ರಾಮಯ್ಯ ಮಾಡಿಕೊಟ್ಟ ಚಿತ್ರ ಹೀಗಿದೆ: ಒಂದು ನಾಯಿ ಕೊಕ್ಕರೆ ಚಿಕ್ಕ ಕೊಕ್ಕರೆಗೆ ಗುಟುಕು ಕೊಡುತ್ತಿರುವುದು. ಕೈಯಿಂದ ಕೆಳಕ್ಕೆ ಬಿದ್ದು ಚಿಕ್ಕ ಕೊಕ್ಕರೆ ಕತ್ತು ಮುರಿದಿದೆ. ಅದು ನನ್ನ ಹತ್ತಿರ ಇದೆ.

—ಕೇಬಿ

ತಿಪ್ಪೆಗೆ ಬಿದ್ದ ಶ್ರೀರಾಘವೇಂದ್ರ

ನಾನು ದಲಿತ ಸಂಘರ್ಷ ಸಮಿತಿಗೆ ಕಾರ್ಯಕರ್ತನಾಗುವ ಮೊದಲು ದೇವರಲ್ಲಿ ತುಂಬಾ ನುಬಿಕೆ ಇಟ್ಟವನು. ನಾನು ಹೊಟ್ಟೆಗೆ ಅನ್ನ ಇಲ್ಲದಿದ್ದರೂ ದೇವ ಮಂದಿರಗಳಿಗೆ ಹೋಗಿ ಪ್ರಾರ್ಥಿಸಿ ಪೂಜೆ ಸಲ್ಲಿಸಿ ಒಣಗಿಕೊಂಡು ಬರುತ್ತಿದ್ದೆ. ದೇವರ ಮೇಲಿನ ಭಕ್ತಿಯಿಂದ ಮಂತ್ರಾಲಯದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಯ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಮಾಡಿ ಬಂದು ನನ್ನ ಮನೆಯಲ್ಲಿ ದೀಪ ಮಾಲೆ ಹಾಕಿಸಿ, ಮೈಕ್‌ಸೆಟ್ ಹಾಕಿಸಿ, ಅನ್ನಧಾನ ಮಾಡಿ500 ರೂಪಾಯಿಯ ಸಾಲದ ಮಗನಾದೆ.

ನಾನು ದೇವರ ಮೇಲೆ ಇಟ್ಟಿರುವ ಭಕ್ತಿಯನ್ನು ಕಂಡು ದಲಿತ ಸಂಘರ್ಷ ಸಮಿತಿಯ ಕೆಲವು ಕಾರ್ಯಕರ್ತರು ನನಗೆ ಕೆಲವು ಸಂಘದ ತತ್ವಗಳನ್ನು ಹೇಳಿ ದಲಿತರ ಕಷ್ಟಗಳನ್ನು ತಿಳಿಸಿ, ಕಣ್ಣಾರೆ ತೋರಿಸಿ ಈ ಬಡವರ ಕಷ್ಟವನ್ನು ನಿನ್ನ ರಾಘವೇಂದ್ರಸ್ವಾಮಿ ಏಕೆ ತೀರಿಸುತ್ತಿಲ್ಲ ಎಂದು ನನ್ನನ್ನು ಪ್ರಶ್ನಿಸಿದರು. ಅದಕ್ಕೆ ನನ್ನಲ್ಲಿ ಉತ್ತರ ಇಲ್ಲದೆ ಮೂಕನಾದೆ. ಇವರ ಮಾತನ್ನು ದಿನವಿಡಿ ಯೋಚನೆ ಮಾಡಿ ದೇವರಿಂದಲೇ ಬಡತನ ಹೆಚ್ಚುತ್ತದೆ. ಎಂದು ತಿಳಿದು ಅಂದು ನನ್ನ ಮನೆಯಲ್ಲಿ ಇದ್ದ ಶ್ರೀ ರಾಘವೇಂದ್ರ ಸ್ವಾಮಿಯ ಪೋಟವನ್ನು ಮೆಟ್ಟಿನಿಂದ ಹೊಡೆದು ತಿಪ್ಪೆಗೆ ಎಸೆದು ದೇವರು ನಂಬುವುದನ್ನು ಬಿಟ್ಟೆ.

ನಾನು ದಿ॥ 20-12-81 ರ ಭಾನುವಾರ ಬೆಳಗ್ಗೆ 10 ಗಂಟೆಗೆ ಚಿತ್ರದುರ್ಗದಲ್ಲಿರುವ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಒಂದು ಶ್ರೀ ಆಂಜನೇಯ ಸ್ವಾಮಿಯ ದೇವಸ್ಥಾನವಿದೆ. ಅದಕ್ಕೆ ಪ್ರತಿವಾರ ಭಕ್ತಾಧಿಗಳು ಬಂದು ಪೂಜೆ ಮಾಡಿ ಹೋಗುತ್ತಾರೆ. ನಾನು ಆ ಸಮಯದಲ್ಲಿ ಓದುತ್ತ ಕುಳಿತುಕೊಂಡಿದ್ದೆ, ಆಗ ಅಲ್ಲಿಗೆ ಕೆಲವರು ಪ್ರೌಢ ವಯಸ್ಸಿನ ಭಕ್ತಾಧಿಗಳು ಬಂದು ಆ ಮೂರ್ತಿಗೆ ನಮಸ್ಕಾರ ಹಾಕಿದರು. ಆಗ ನಾನು ಈ ಕಲ್ಲಿನ ಆಕೃತಿಗೆ ನಮಸ್ಕಾರ ಹಾಕಿದಿರಲ್ಲ ನಿಮಗೆ ಏನು ಸಿಕ್ಕಿತು ಎಂದೆ. ಅದಕ್ಕೆ ಅವರು ದೇವರು ಅವನು,ಅದಕ್ಕೆ ನಮಸ್ಕಾರ ಹಾಕಿದೆ ಎಂದರು. ದೇವರೆಂದರೆ ಯಾರುಎಂದು ಪುನಃ ಪ್ರಶ್ನೆ ಹಾಕಿದೆ. ಅದಕ್ಕೆ ಉತ್ತರ ದೇವರೆಂದರೆ ದೇವರು ಎಂದರು.

ಅದಕ್ಕೆ ನಾನು ಉದಾಹರಣೆ ಕೊಟ್ಟೆ: ದೇವರು ಎಂಬ ವಸ್ತು ಅಥವಾ ರೂಪ, ವಿಗ್ರಹ ಯಾವುದು ಇಲ್ಲ. ನಾವು ಹಿಂದಿನಕಾಲದಿಂದಲೂ ಬಳಸಿಕೊಂಡ ಶಬ್ಧವೇ ದೇವರು. ನಿಜವಾದ ದೇವರು ಯಾರು ಇಲ್ಲವೆಂದೆ. ಅದಕ್ಕೆ ಭಕ್ತಾಧಿಗಳು ದೇವರು ಇಲ್ಲವೆಂದ ಮೇಲೆ ನಿನ್ನ ಕಾಲಿನಿಂದ ಆ ದೇವರನ್ನು ಹೊಡೆ ಎಂದರು. ಆಗ ನಾನು ಯಾವ ಭಯ ಭಕ್ತಿ ಇಲ್ಲದೆ ಕಾಲಿನಿಂದ ಆ ಆಂಜನೇಯ ಸ್ವಾಮಿ ಮೂರ್ತಿಗೆ ಹೊಡೆದೆ. ಆಗ ಭಕ್ತಾಧಿಗಳು ನಿನ್ನ ಕಣ್ಣು ಹೋಗುತ್ತದೆ. ಕಾಲು ಹೋಗುತ್ತದೆ ಎಂದು ಭಯದಿಂದ ಹೇಳಿ ಹೋದರು. ಆದರೆ ನನಗೆ ಇಲ್ಲಿಯವರೆಗೆ ಯಾವ ರೀತಿಯ ತೊಂದರೆ ಇಲ್ಲದೆ ಜೀವಿಸುತ್ತಇದ್ದೇನೆ.

ಎಂ. ಹನುಮಂತಪ್ಪ
ಚಿತ್ರದುರ್ಗ

"ದಾಸ್ಯವೃತ್ತಿಯಿಂದ ಬಾಳುವುದಕ್ಕಿಂತ ಸಾಯ

ಶ್ರೀ ಚೆನ್ನಯ್ಯ ನನ್ನ ಮಿತ್ರ. ಇವರ ಜೀವನದಲ್ಲಿ ಹಾದುಹೋದ ಘಟನೆಯೊಂದು ದಲಿತರ ಕಿಚ್ಚಿಗೆ ಕ್ರಿಯೆಯನ್ನಾಗಿಸಿ ದಲಿತರಿಗೊಂದು ಮಾರ್ಗದರ್ಶನವಾಗುವುದರಲ್ಲಿ ಅನುಮಾನವೇ ಇಲ್ಲ. ಆ ಘಟನೆ ಹೀಗಿದೆ :

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೋಕಿನ ದೊಡ್ಡಗಾವನಹಳ್ಳಿಯಲ್ಲಿ ಚೆನ್ನಯ್ಯನವರ ಮಗನಾಗಿ ಚೆನ್ನಯ್ಯ ಹುಟ್ಟಿದರು. ಪಿ.ಯು.ಸಿ. ವ್ಯಾಸಂಗ ಮಾಡುತ್ತಿದ್ದಾಗ ಅಂಬೇಡ್ಕರ್ ಬರೆದ 'ಅಸ್ಪೃಶ್ಯತೆ' ಪುಸ್ತಕವನ್ನು ಓದಿದ ಮೇಲೆ ಮನಸ್ಸಿನಲ್ಲಿ ಕಿಚ್ಚನ್ನು ಹಚ್ಚಿಸಿಕೊಂಡರು. ಪುಸ್ತಕ ಓದಿದ ಮೇಲೆ ಇವರ ರಕ್ತದೊಂದಿಗೆ ಸೇರಿದ ಗ್ರಂಥದ ಸಾರವಾದರೂ "ದಲಿತನಾಗಿ ಹುಟ್ಟಿದ ಮೇಲೆ ವೀರನಾಗಿಬಾಳು ; ಅನ್ಯರ ಸಹಾಯವನ್ನು ಬಯಸಬೇಡ ; ದಾಸ್ಯ ವೃತ್ತಿಯಲ್ಲಿ ಬಾಳುವುದಾದರೆ ಸಾಯುವುದೇ ಮೇಲು" ಎನ್ನುವುದು.

ಒಂದು ದಿನ ರಾಗಿ ಅರಗಲು ಏರು ಕಟ್ಟಿರುವಾಗ ಮನೆಯ ಹತ್ತಿರ ಘಟನೆಯೊಂದು ನಡೆಯುತ್ತದೆ. ಮನೆ ಹಿತ್ತಲಲ್ಲಿ ಹಾಕಿದ್ದ ಸೋರೆಗಿಡ ಯಾವ ಜಾತಿಮತದ ಭೇದ ಕಾಣದೆ ತನ್ನ ಬಳ್ಳಿಯನ್ನು ಚಾಚಿಕೊಂಡು ಪಕ್ಕದ ಭೂಮಿಯ ಒಡೆಯನಾದ ಪಟೇಲನ ಹೊಲಕ್ಕೂ ಬೆಳೆದಿತ್ತು. ಹನ್ನೆರಡು ವರ್ಷದ ತಂಗಿ ಪಟೇಲನ ಹೊಲದ ಕಡೆಗೆ ಇವರ ಗಿಡದಿಂದಲೇ ಬಿದ್ದಿದ್ದ ಎರಡು ಸೋರೆಕಾಯಿಗಳನ್ನು ಕಿತ್ತಳು. ಹತ್ತಿರದಲ್ಲೆ ಇದ್ದ ಪಟೇಲರ ಮಗನಿಗೆ ರಕ್ತ ನೆತ್ತಿಗೇರಿ "ಏ ಹೊಲತಿ ಮುಂಡೆ ಸೋರೆಗಿಡ ನಿನ್ನದಿರಬಹುದು ನಮ್ಮ ಜಮೀನಿನ ಕಡೆ ಇರೊ ಕಾಯಿ ಕೀಳಕ್ಕೆ ಯಾತಕ್ಕೆ ಬಂದೆ" ಎಂದು ನಾಲಿಗೆಗೆ ಅಸಭ್ಯ ಬೈಗುಳಗಳನ್ನು ಸವರಿಕೊಂಡು ಬೈದ. "ಚಪ್ಪಲಿಯಲ್ಲಿ ಹೊಡೀತೀನಿ ರಂಡೆ" ಎಂದು ಚೆನ್ನಾಗಿ ಬಾಸುಂಡೆಗಳು ಬರುವಂತೆ ಹೊಡೆದ.

ಹೊಲದಲ್ಲಿದ್ದ ಚೆನ್ನಯ್ಯನಿಗೆ ಸುದ್ದಿ ತಿಳಿದು ಅದನ್ನು ಅಲ್ಲೆ ಬಿಟ್ಟು ಚಾವುಟಿ ಹಿಡಿದುಕೊಂಡು ಮನೆಯ ಹಿತ್ತಲ ಹತ್ತಿರಕ್ಕೆ ಬಂದಾಗ ತಂಗಿಯ ಮೈಮೇಲೆ ಪ್ರತ್ಯಕ್ಷವಾಗಿದ್ದ ಬಾಸುಂಡೆಗಳನ್ನು ಕಂಡು ದುಃಖಿತನಾಗುತ್ತಾನೆ. ಕಿಚ್ಚು ಕ್ರಿಯೆ ಕಚ್ಚಿ ಪಟೇಲನ ಮಗನಿಗೆ ಚೆನ್ನಾಗಿ ಬೈದು ಇನ್ನೆಂದಾದರೂ ಈ ರೀತಿಯಾದರೆ ಚಪ್ಪಲಿಯಲ್ಲಿ ಹೊಡೆಯುವೆನೆಂದು ಕೂಗುತ್ತಾನೆ. ಜೀವನದಲ್ಲೆ ಎಂದೂ ಹೊಲೆಯನೊರ್ವನಿಂದ ಬೈಸಿಕೊಳ್ಳದ ಪಟೇಲ ಮತ್ತು ಅವನ ಮಗನಿಗೆ ಪಾತಾಳಕ್ಕೆ ಸೇರಿದಂತೆ ಬಾಸವಾಗಿ ಉಳಿದ ಸವರ್ಣೀಯರನ್ನು ಒಟ್ಟಿಗೆ ಸೇರಿಸುತ್ತಾರೆ. ಕೇವಲ ಒಬ್ಬ ಕುಲವಾಡಿ ಮಗ ಪಟೇಲನ ಮಗನಿಗೆ ಚಪ್ಪಲಿಯಲ್ಲಿ ಹೊಡೆಯುವೆ
ಹೇಳಿದುದು ಮಾನಮರ್ಯಾದೆಯ
ಯಾಗಿ ಪರಿಗಣಿತವಾಗುತ್ತದೆ.

ಇದೇ ಸಮಯ ಉಪಯೋಗಿಸಿಕೊ
ಉಳಿದ ಸವರ್ಣೀಯರೆಲ್ಲರೂ ಹೊಲೆ
ತಲೆ ಎತ್ತದಂತೆ ಮಾಡಲು ಹೊಂಚು
ತ್ತಾರೆ. ಹೆಚ್ಚು ಕಡಿಮೆಯಾದರೆ ಮುಗಿ
ತೀರಬೇಕೆಂದು ಸನ್ನಾಹಮಾಡಿಕೊಂಡು
ದೊಣ್ಣೆ, ಮಚ್ಚುಗಳನ್ನು ಶೇಖರಿಸಿಕೆ

ಶ್ರೀಮತಿ ಪದ್ಮಾಕ್ಷಿ ಶಿವಯ್ಯ
ಸಕಲೇಶಪುರ

ತ್ತಾರೆ. ಸುಮಾರು ಮೂವತ್ತು ಜನರು
ಯ್ಯನ ಮನೆಯ ಹತ್ತಿರಕ್ಕೆ ಬಂದು ಆತ
ಕರೆಯುತ್ತಾರೆ. ಪರಿಸ್ಥಿತಿಯನ್ನು ತಿಳಿದ
ತಾಯಿಗಳು ನಾವೇ ಬರುತ್ತೇವೆಂದು
ನಡುಗಿಕೊಂಡೇ ಹೋಗುತ್ತಾರೆ. ಊ
ಸುಮಾರು ೩೦೦ ಜನರು ಸೇರಿರುವು

ಕಾಲ ಕನ್ನಿಕೆ ಜತೆ ಆರೆಗಳಿಗೆ ಮಿಲನ

ತುಳಿದು ಸಾಗುತ್ತಿದೆ ಕಾಲ ಎದೆಯನ್ನ
ಉಳಿಸಿ ಹೋಗಿದೆ ಕಳೆದ ಕಪ್ಪು ದಿನಗಳ ನೆನಪನ್ನ
ದೆವ್ವೋಲಿಯಲಿ ನನ್ನವರ ರಕ್ತ ಸ್ನಾನದಿಂದ
ಕೆಂಪಾಗಿವೆ ಅವರ ಬಂದೂಕ

ಲೇ ಕಾಲವೆಂಬ ವಯ್ಯಾರಿಯೇ
ರಾತ್ರಿ ತಾರಕ್ಕಿಗಳ ಮುಡಿಗೇರಿಸಿ ನಡೆದಂಥ ಚೆಲುವೆಯೆ
ನಮ್ಮ ಹಗಲುಗಳಿಗೂ ಕಪ್ಪು ಬೆಂಕಿಯ ಉಣಿಸಿದವಳೆ
ಹಸಿದ ಕರುಳ ಮಾಲೆಗಳ ಧರಿಸಿ ಕೊರಳಲಿ
ಮೊಳೆತ ಸಾವಿರ ಆಕ್ರಂದನಗಳ ಕೊಲ್ಲುತಲಿರುವ
ನಿನ್ನ ಚರಿತ್ರೆಯ ಗರ್ಭದಲ್ಲಿ ಏನಿರುವುದು ಗೊತ್ತಾ ?

ಉಕ್ಕಿನ ಗೋಡೆಗಳ ನಡುವೆ ಕೂಡಿಡಲಾಗಿರುವುದು ಜ್ವಾಲಾಮುಖಿಗಳ
ಹಸಿದ ದೇಹಗಳನ್ನು ಸಾವಿನ ಕೊಪಕ್ಕೆ ತಳ್ಳಲಾಗಿರುವುದು
ನರಮನುಷ್ಯರ ನೆತ್ತರಿನ ಕಲರುಗಳಿಂದ
ನಾಳಿನ ಕನಸುಗಳನ್ನ ಸಿಂಗರಿಸಲಾಗಿರುವುದು
ಕುಡಿದ ಸಾರಾಯಿ ವಿಷವಾಗಿ ಸತ್ತವರ ಎಲುಬುಗಳು
ಮಣ್ಣಾಗಿರಲು ಗಿರಿಕಂದರಗಳೆದೆಯಲಿ ಬೆಳ್ಚಿಯ
ಬೆಂಕಿ ಮೌನ ಹಬ್ಬುತ್ತಿರುವುದು
ರಕ್ತಕುಡುಕರು ನಗುತ್ತಿಹರು ಸಾಧುಪುರೆದಲ್ಲು

ಪ್ರತಿಜನವರಿ ಒಂದರಂದು ಕೃತಕ ಹೂವುಗಳಿಂದ
ಕೃತಕ ಶುಭಾಶಯಗಳಿಂದ ಸಿಂಗರಿಸಲ್ಪಡುವ ಕಾಲವೆ
ನೀನೀಗಲೂ ಗುಲಾಮಳಾಗೇ ಇರುವೆ
ಖೊಮೀನಿಗಿಂತಲು ಕ್ರೂರಿ ಸೂಳೇಮಗ ಮನುವಿಗೆ

ಆದರೆ ತಿಳಿದುಕೋ
ಈ ಕಪ್ಪುರಾತ್ರಿಗಳ ಗರ್ಭದಲ್ಲಿ ನಮ್ಮ ಒಡಲಬೆಂಕಿಯಿದೆ
ನಾವು ಮೌನ ಕುದಿಯುತ್ತಿರುವ ಅಗ್ನಿ ಪರ್ವತಗಳು
ನಾಳಿನ ಆಶಯಗಳೊಂದಿಗೆ ನಾವು ಸ್ಫೋಟಿಸಿದಾಗ
ನಮ್ಮದೆಯ ಲಾವಾದಲ್ಲಿ ಇಡೀ ಇಂಡಿಯಾ ಭಸ್ಮವಾಗುವುದು
ಭಸ್ಮದೊಳಗಿಂದ ಹೊಸ ಮನುಷ್ಯರು ಉದಿಸುವರು

ಜಾತಿಗಳಿಲ್ಲದ ಹಸಿವಿಲ್ಲದ ಆಕ್ರಂದಗಳಿಲ್ಲದ
ಮನುಷ್ಯ ಲೋಕದ ಚರಿತ್ರೆಯನ್ನವರು ಬರೆಯುವರು
ಬಾನ ಚಪ್ಪರದ ಕೆಳಗೆ ನೆರಳು ಬಿಸಿಲಾಗಿ
ಗುರುತಿಸಲಾರದ ಬರೀ ರೇಖೆಗಳಾಗಿ
ಸುಳಿದು ಹೋಗುವ ಕಾಲವೆ
ನಾಳಿನ ಸೂರ್ಯ ನಿನ್ನನ್ನು ರಕ್ತಮಯವಾಗಿಸುವನು

ಮುಳ್ಳೂರು ನಾಗರಾಜ್

...ನೇ ಮೇಲು" : ಚನ್ನಯ್ಯನ ಕಥೆ

...ಡು ಪ್ರಾಣವೇ ಹೋದಂತಾಗುತ್ತದೆ.

ಆಗ ಪಟೇಲ "ಏನ್ಲಾ ಕುಲವಾಡಿ ಚೆನ್ನ ...ನ ಮಗ ವೀರಾದಿ ವೀರನಂತೆ ನಮ್ಮಗಳಿಗೆ ...ಪ್ಪಲಿಯಲ್ಲಿ ಹೊಡೆಯುತ್ತಾನಂತೆ ; ಅವ್ವ, ...ಮ್ಮ ಎಂದು ಬಯ್ಯಲು ಅವನ ಸೊಕ್ಕು ಎಷ್ಟಿ ...ಹುದು. ಅವನಿಗೆ ಮರ್ಯಾದೆ ಮಾಡಲು ...ವತ್ತು ಕಾದಿದ್ದೇವೆ".

"ಹೊಲೆಯ ನನ್ನ ಮಗನೇ ನಿನ್ನ ಮಗ ...ಡ್ಗಳ ಜೊತೆಯಲ್ಲಿ ಹೆಂಗೆ ನಡಕೊಬೇಕೂಂತ ...ಲ್ಲ"

"ಅವನ ಕಥೆ ಮುಗೀತು ಅಂತ ತಿಳೀರಿ" ...ತ ಬಾಯಿಸಮಾಧಾನದ ಸ್ಥಿತಿ ತಲುಪುವವ ...ಜೂ ನಿಂದಿಸುತ್ತಾರೆ.


ಕೆಲವರು ಪರಾಕ್ರಮದ ಪರಾಕಾಷ್ಠೆಗೇರಿ ...ನ ಅಪ್ಪ ಅವ್ವನನ್ನು ಹೊಡೆಯಲು ಬರು ...ರೆ.

ತಂದೆತಾಯಿಗಳು ಮಗನ ಕಥೆ ಮುಗೀತು ...ತ ತಿಳಿದು ಪಟೇಲರ ಕಾಲು ಹಿಡಿದು ಪ್ರಾಣ ...ಕ್ಷೆ ಕೇಳುವವರಂತೆ ಗೊಳೊ ಅಂತ ಕಂಬನಿಗರೆ ...ಯುತ್ತಾರೆ.

...ಷ್ಟು ಬೇಕಾದರೂ ದಂಡ ಹಾಕಿ ಆದರೆ ನನ್ನ ...ಗನನ್ನು ಹಿಂಸಿಸಬೇಡಿರೆಂದು ವಿನಯಪೂರ್ವಕ ...ಗಿ ಪ್ರಾರ್ಥಿಸುತ್ತಾರೆ. ಆದರೆ ಊರಿನ ಹಿರಿಯರು ಇದನ್ನು ಲೆಕ್ಕಿಸದೆ ಊರಿನ ಸುಮಾರು ೧೫ ಜನ ದಾಂಡಿಗರು ಹಾಗು ವಿವೇಕ ಇಲ್ಲದವರನ್ನು ಚೆನ್ನಯ್ಯನನ್ನು ಕರೆಯಲು ಕಳುಹಿಸುತ್ತಾರೆ. ಅವರು ಬಂದು ಮನೆಯ ಒಳಗೆ ತಲೆ ಹಾಕಿ ಏ ಚನ್ನ ಊರಿನ ಜನ ಕರಿತಾರೆ ಎನ್ನುತ್ತಾರೆ. ಮಲಗಿದ್ದ ಚೆನ್ನಯ್ಯನಿಗೆ ಎಚ್ಚರವಾಗುತ್ತಿದ್ದ ಹಾಗೆ ತಂದೆತಾಯಿ ಊರ ಒಳಗೆ ಗೌಡರ ಹಿಡಿತದಲ್ಲಿ ಇರುವುದು ತಿಳಿದು ತನ್ನ ಗತಿ ಏನೆಂದು ನಾನು ಪಂಚಾಯ್ತಿಗೆ ಬರುವುದಿಲ್ಲವೆಂದು ಪ್ರತಿಭಟಿಸುತ್ತಾನೆ. ಆದರೆ ಆ ದಾಂಡಿಗರು ಒಳಗಡೆಯೇ ನುಗ್ಗಿ ದರದರನೆ ಎಳೆದು ತರುತ್ತಾರೆ. ಆಗ ಚೆನ್ನಯ್ಯ ವಿಧಿ ಇಲ್ಲದೆ ಕ್ಷಮೆ ಕೇಳಿ ಒಳಗೆ ಹೋಗಿ ಬರಲು ಪ್ರಾರ್ಥಿಸುತ್ತಾನೆ. ಬೇಗನೆ ಬರಬೇಕೆಂದು ಬಾಗಿಲಲ್ಲಿ ನಿಲ್ಲುತ್ತಾರೆ, ಈತನನ್ನು ನೋಡಿದ ತಂಗಿಯರು,ತಮ್ಮಂದಿರು, ೮೦ ವರ್ಷದ ಅಜ್ಜಿ ಅವನನ್ನು ತಬ್ಬಿಕೊಂಡು ಗೋಳೋ ಎಂದು ಅಳುತ್ತಾರೆ.ನಿನ್ನನ್ನು ಬಿಡುವುದಿಲ್ಲ ನಿನ್ನ ಕತೆ ಮುಗಿಯಿತು ಕಂದ ಎಂದು ಅಜ್ಜಿಯ ಕತೆ ಹೇಳತೀರದು. ಆದರೆ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಚೆನ್ನಯ್ಯ ಬೆವರುತ್ತಾನೆ. ನಂತರ ಬಾಬ ಸಾಹೇಬರನ್ನು ನೆನೆದು ಒಂದು ಕುಡುಗೋಲನ್ನು ತನ್ನ ಸೊಂಟಕ್ಕೆ ಸಿಕ್ಕಿಸಿಕೊಂಡು ಊರಿನ ಸವರ್ಣೀಯ ದಾಂಡಿಗರ ಜೊತೆ ಬರುತ್ತಾನೆ. ಆದರೆ ಇವರು ಚನ್ನಯ್ಯನನ್ನು ಉದ್ದಕ್ಕೂ ಅಪಹಾಸ್ಯ ಮಾಡುತ್ತಾ ಓ ಚನ್ನಯ್ಯನವರು ಬರಬೇಕು ನಿನ್ನ ಕೈಲಿ ಹೊಡೆಸಿಕೊಳ್ಳಲು ಸುಮಾರು ೨೦೦ ಜನ ಕುಳಿತಿದ್ದಾರೆ ಎಂದುಕೊಂಡು ತುಂಬಾ ಮೂದಲಿಸುತ್ತಾರೆ. ಊರಿನ ಮುಂದೆ ಬಂದ ಕ್ಷಣ ಎಲ್ಲರೂ ಬಾಯಿಗೆ ಬಂದಂತೆ ಬೈ ಯು ವ ವ ರು ಬೇರೆ, ಹಾಸ್ಯ ಮಾಡುತ್ತ ಈ ಚನ್ನನೇ ನಮ್ಮ ಹೆಂಗಸರಿಗೆ ಗಂಡ ಕಂಡ್ರಲೋ, ಲೋ ಚೆನ್ನ ಮೆಟ್ಟಿನಲ್ಲಿ ಬಡಿ ಎಂದು ಮೂರು ನಾಲ್ಕು ಜನ ಎದ್ದು ಬಂದು ತಲೆಯ ಮೇಲೆ ಬಿಂಸಿನಿಂದಲೇ ಹೊಡೆಯುತ್ತಾರೆ. ಕೆಲವರು ಪಕ್ಕೆಗೆ ಮುಷ್ಟಿಯಿಂದ ತಿವಿಯುತ್ತಾರೆ. ಇವರ ನಿಂದನೆ ಹೇಳತೀರದಷ್ಟಾಗುತ್ತದೆ. ಇದನ್ನು ಪ್ರತ್ಯಕ್ಷವಾಗಿ ಕಂಡ ತಂದೆತಾಯಿ ನನ್ನ ಮಗನನ್ನು ಕಾಪಾಡಿ ಎಂದು ಮಮ್ಮಲಮರುಗುತ್ತಾರೆ,ಆಕಾಶ ಬಿರಿಯುವಂತೆ ಬೇಡುತ್ತಾರೆ. ಅಷ್ಟರೊಳಗೆ ದಾಂಡಿಗರೆಲ್ಲಾ ಸೇರಿ ಹಗ್ಗ ಹಾಗು ದೊಣ್ಣೆಗಳನ್ನು ತೆಗೆದುಕೊಂಡು ಇವನನ್ನು ಅಲ್ಲಿಯ ಕರಿಕಲ್ಲಿಗೆ ಕಟ್ಟಿ ಹೊಡೆಯಲು ಬಂಧಿಸಲು ಮುಂದೆ ಬರುತ್ತಾರೆ. ಅಂದಿನವರೆಗೂ ಮಾತು ಹೊರಡಲು ಸಾಧ್ಯವಾಗದೆ ಹೆದರಿ ನಡುಗುತ್ತಿರುತ್ತಾನೆ. ಇನ್ನೇನು ನನ್ನನ್ನು ಕಂಬಕ್ಕೆ ಬಿಗಿಯುತ್ತಾರೆ ಎಂಬುದು ತಿಳಿಯುತ್ತದೆ. ತಂದೆ, ತಾಯಿ, ತಮ್ಮ, ತಂಗಿಯರ ಗೋಳು ಗಗನ ಮುಟ್ಟುತ್ತದೆ. ಆದರೆ ನ್ಯಾಯ ಹೇಳುವವರಿಲ್ಲ ನೀತಿ ಕೇಳುವವರಿಲ್ಲಾ ಚೆನ್ನಯ್ಯ ಕೊನೆ ಗಳಿಗೆಯಲ್ಲಿ ತನ್ನಲ್ಲಿದ್ದ ಕುಡುಗೋಲನ್ನು ಕೈಗೆ ತೆಗೆದುಕೊಂಡು ಹಗ್ಗವನ್ನು ತುಂಡರಿಸಿ ಸಿಡಿಲು ಎರಗಿದಂತೆ ಇವರ ಮೇಲೆ ವೀರಾವೇಶದಿಂದ ಬೀಳುತ್ತಾನೆ. ತನ್ನ ತಾಯಿ ಬೇಡವೆಂದು ಚನ್ನನ ಕಾಲು ಹಿಡಿಯುತ್ತಾಳೆ. ಅಲ್ಲೆ ಪುಟ್ಟ ಪುಟ್ಟ ಭಾಷಣ ಮಾಡಿ ತಂದೆ, ತಾಯಿ, ತಮ್ಮ, ತಂಗಿಯರಿಗೆಲ್ಲಾ ರೊಚ್ಚಿಗೇಳಿಸುತ್ತಾನೆ. ಇವನ ಮಾತಿಗೆ ಸಿಡಿದೆದ್ದು ಇವರು ನಮ್ಮನ್ನು ಮುಗಿಸುವುದರ ಒಳಗೆ ನಿಮ್ಮನ್ನು ಬಿಡುವುದಿಲ್ಲವೆಂದು ಎಲ್ಲರೂ ಸವರ್ಣೀಯರ ಮೇಲೆ ವೀರಾವೇಶದಿಂದ ಮುಂದೆ ಬಂದವರಿಗೆಲ್ಲಾ ಹೊಡೆಯುತ್ತಾರೆ ಹೊಡೆಸಿಕೊಳ್ಳುತ್ತಾರೆ. ಚೆನ್ನಯ್ಯ ಪಟೇಲನನ್ನು ನೀವು ಮಾತ್ರ ಬಾಯಿಗೆ ಬಂದಹಾಗೆ ಬೈಯಬಹುದು ನಾವು ಬೈದರೆ ಕಲ್ಲುಕಂಬಕ್ಕೆ ಕಟ್ಟುತೀರ ಇಗೋ ನಿನ್ನ ಕತೆ ಮುಗಿಯಿತು ಎಂದು ಕುಡುಗೋಲ ಹಿಂದಿನಿಂದ ಹೊಡೆಯುತ್ತಾನೆ. ಪಟೇಲ ಸತ್ತ ಹಾಗೆ ಬೀಳುತ್ತಾನೆ. ನಮ್ಮನ್ನು ಕತ್ತರಿಸಿ ಬಿಡುತ್ತಾನೆ ಎಂದು ಮೂತ್ರಕ್ಕೆಂದು ಒಬ್ಬರು ಹೋಗುತ್ತಿದ್ದರೆ, ನಮಗೇಕೆ ಈ ಕೆಲಸ ನಾಳೆ ಕೋರ್ಟ್, ಜೈಲು ಅಲೆಯುವವರು ಯಾರು ಎಂದು ಒಬ್ಬೊಬ್ಬರಾಗಿ ನುಣುಚಿಕೊಳ್ಳುತ್ತಾರೆ. ಎಲ್ಲರೂ ಹೋಗಿ ಕೊನೆಗೆ ಉಳಿದ ಪಟೇಲ ಮತ್ತು ಮಕ್ಕಳು ಚನ್ನಯ್ಯನಿಗೆ ಶರಣಾಗುತ್ತಾರೆ. ನಮ್ಮನ್ನು ಕಾಪಾಡಬೇಕೆಂದು ಬೇಡುತ್ತಾರೆ. ನಂತರ ಚನ್ನಯ್ಯ ತನ್ನ ನಿಜರೂಪಕೆ ಬಂದು ಕ್ಷಮಿಸುತ್ತಾನೆ.

ಈಗ ಎಲ್ಲರೂ ಸಮಾನತೆಯಿಂದ ಒಳಗೆ ಕಿಚ್ಚು ಇದ್ದರೂ ಹೊರಗೆ ತೋರಿಸುವ ಧೈರ್ಯ ಇಲ್ಲದೆ ಸಮಾನತೆಯ ವೇದ ಹೇಳುತ್ತಾ ಸಾಗುತ್ತಿದೆ.

ಇಂತಹ ದುರ್ಗಟನೆ ಒಂದಲ್ಲ ಸಾವಿರಾರು ನೆಡೆಯುವುದು ಸಹಜ.ಆದರೆ ಬಡ ಜನತೆಗೆ ಈ ನನ್ನ ಮಿತ್ರ ಆದರ್ಶ ವ್ಯಕ್ತಿಯಾಗಿ ಬಾಬಾ ಸಾಹೇಬರವರ ವಾಣಿಯಂತೆ "ಬದುಕು ಇಲ್ಲ ಸಾಯಿ" ಎಂಬುದರ ವ್ಯಾಖ್ಯಾನದಂತೆ ವೀರತನದಿಂದ ಹೊರ ಬಂದು ಈಗ ಸಕಲೇಶಪುರ ತಾಲೋಕ್ ಆಫೀಸಿನಲ್ಲಿ ಗುಮಾಸ್ತ ವೃತ್ತಿಯನ್ನು ಮಾಡುತ್ತಾ ದಲಿತರ ಬಗ್ಗೆ ಅನುಕಂಪ, ಕೈಲಾದ ಸಹಾಯ ಮಾಡಲು ಸದಾಸಿದ್ಧರಾಗಿದ್ದಾರೆ. ಇವರ ಬದುಕು ದಲಿತರೆಲ್ಲರಿಗೂ ಆದರ್ಶವಾಗುವುದೆಂದು ನಂಬಿದ್ದೇನೆ.



ಕಣ್ಣೀರು ಕಥೆಗಳ ಭೂ ಅಭಿವೃದ್ಧಿ ಬ್ಯಾಂಕ್

ಪಿರಿಯಾಪಟ್ಟಣ ತಾಲ್ಲೂಕು ಹಾರ್ನಳ್ಳಿ ಹೋಬಳಿ, ಮನುಗನಹಳ್ಳಿಯಲ್ಲಿ ವಾಸವಾಗಿರುವ ಹರಿಜನ ವಿಧವೆ ಪುಟ್ಟಮ್ಮನ ಹೋರಾಟ ಹೇಳತೀರದಾಗಿದೆ. ಪುಟ್ಟಮ್ಮನ ಗಂಡ ಜವರಯ್ಯ ಜಮೀನು ಅಭಿವೃದ್ಧಿಪಡಿಸಲು ಪ್ರಾಥಮಿಕ ಸಹಕಾರ ಭೂ ಅಭಿವೃದ್ಧಿ ಬ್ಯಾಂಕ್, ಪಿರಿಯಾಪಟ್ಟಣ ಶಾಖೆಯಿಂದ ಸಾಲವನ್ನು ಪಡೆದಿರುತ್ತಾನೆ.

ಈ ಮಧ್ಯೆ ಹರಿಜನ ನಿವಾಸಿ ಕಾಳಯ್ಯನಿಂದ ೨ ಎಕರೆ ಭೂಮಿಯನ್ನು (ಗೊಬ್ಬಳ್ಳಿ ಕಾವಲ್ ಸರ್ವೆ ನಂ. ೧) ೨೫೦೦ ರೂ.ಗಳಿಗೆ ಕ್ರಯಕ್ಕೆ ಕೊಂಡಿರುತ್ತಾನೆ. ಕಾಳಯ್ಯನ ಎರಡು ಎಕರೆ ಜಮೀನಿನಲ್ಲಿ ಭಾವಿತೋಡಿಸಿ ಸಾಲದಿಂದ ಪಡೆದ ಪಂಪಸೆಟ್ಟನ್ನು ಅಳವಡಿಸಿರುತ್ತಾನೆ.

ಇದರ ನಡುವೆ ಜವರಯ್ಯ ಮತ್ತು ಕಾಳಯ್ಯ ಮರಣ ಹೊಂದಿರುತ್ತಾರೆ. ಇಲ್ಲಿಂದ ಪುಟ್ಟಮ್ಮನ ಹೋರಾಟ ಪ್ರಾರಂಭವಾಗುತ್ತದೆ.

ಕಾಳಯ್ಯನ ಮಗ ಮರಿಯಯ್ಯ ಭೂನ್ಯಾಯ ಮಂಡಲಿಗೆ ೨ ಎಕರೆ ಜಮೀನನ್ನು ಪುಟ್ಟಮ್ಮನಿಂದ ಬಿಡಿಸಿ ಕೊಡಬೇಕೆಂದು ಅರ್ಜಿ ಸಲ್ಲಿಸುತ್ತಾನೆ.

ಭೂನ್ಯಾಯ ಮಂಡಲಿಯಲ್ಲಿ ಪುಟ್ಟಮ್ಮನು ಹಾಜರಾಗಿ, ಜಮೀನು ಕ್ರಯಮಾಡಿಕೊಂಡಿರುವುದು ನಿಜವೆಂತಲೂ, ಆ ಜಮೀನು ಅಡೆಮಾಡಿ (ಗಿರಿವಿ) ಪಿರಿಯಾಪಟ್ಟಣ ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ತೆಗೆದಿರುವುದಾಗಿಯೂ, ಅದರ ಆರ್ ಆರ್ ದಾಖಲೆ ಪಿಎಲ್‌ಡಿ ಬ್ಯಾಂಕಿನಲ್ಲಿರುವುದಾಗಿ ತಿಳಿಸಿ, ಸಾಲವನ್ನು ಬ್ಯಾಂಕಿನಿಂದ ವಜಾ ಮಾಡಿಸಿ, ಜಮೀನನ್ನು ತೆಗೆದುಕೊಳ್ಳುವಂತೆ ಹೇಳಿರುತ್ತಾಳೆ. ಆದರೆ ಪುಟ್ಟಮ್ಮನಿಗೆ ಈಗ ಅನ್ಯಾಯವಾಗಿದೆ.

ಅಸಿಸ್ಟೆಂಟ್ ಕಮೀಷನರ್‌ರವರು ೨ ಎಕರೆ ಜಮೀನನ್ನು ಮರಿಯಯ್ಯನಿಗೆ ವಾಪಸು ಬಿಡಿಸಿ ಕೊಟ್ಟಿರುತ್ತಾರೆ. ಪುಟ್ಟಮ್ಮನ ಸಾಲ ಮಾತ್ರ ದಿನದಿಂದ ದಿನಕ್ಕೆ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ.

ಬ್ಯಾಂಕಿನಿಂದ ಬಂದಿರುವ ನೋಟೀಸು ಪ್ರಕಾರ ಪುಟ್ಟಮ್ಮ ಪಾವತಿ ಮಾಡಬೇಕಾಗಿರುವ ಸಾಲದ ಹೊರೆ ರೂ. ೩೪೪೬ಗಳಷ್ಟಾಗಿದೆ.

ಆದರೆ ಅಸಿಸ್ಟೆಂಟ್‌ರಿಜಿಸ್ಟ್ರಾರ್, ಕೋ–ಆಪರೇಟಿವ್ ಸೊಸೈಟಿ ಹುಣಸೂರು ಇವರ ಕಛೇರಿಯಿಂದ ಬಂದ ಪತ್ರದಲ್ಲಿ ೩೧೬೧,೬೩ ರೂ. ಮಾತ್ರ ಪಾವತಿ ಮಾಡಲು ತಿಳಿಸಲಾಗಿದೆ.

ಈಗಿರುವ ಪರಿಸ್ಥಿತಿಯನ್ನು ತಿಳಿಸಿ, ಬ್ಯಾಂಕಿನ ಅಧಿಕಾರಿಗಳಿಗೆ ಭೂ ನ್ಯಾಯಮಂಡಲಿಗೆ ಅರ್ಜಿಯ ಮೂಲಕ ಖುದ್ದಾಗಿ ಎಲ್ಲ ವಿಷಯಗಳನ್ನು ತಿಳಿಸಿರುತ್ತಾಳೆ.

ಈ ಮಧ್ಯೆ ಬ್ಯಾಂಕಿನವರು ಪಂಪಸೆಟ್ಟನ್ನು ವಾಪಸು ತೆಗೆದುಕೊಂಡು ಹೋಗಿರುತ್ತಾರೆ. ಅದಕ್ಕೆ ೩೫೦೦ ರೂ.ಗಳಿಗೆ ನಿಮ್ಮ ಸಾಲದಲ್ಲಿ ವಜಾ ಮಾಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಯಾವೊಂದು ರಶೀತಿಯನ್ನೂ ಕೊಟ್ಟಿರುವುದಿಲ್ಲ.

ಹರಿಜನ ಗಿರಿಜನ ಅಭಿವೃದ್ಧಿಯ ಕಾರ್ಯಕ್ರಮದಲ್ಲಿ ಸರ್ಕಾರದಿಂದ ಸಬ್ಸಿಡಿ ಸಿಕ್ಕಿರುವುದನ್ನು ತಿಳಿಸಿಲ್ಲ. ಒಟ್ಟು ಸಾಲ ಎಷ್ಟು ? ಅದರಲ್ಲಿ ಸಬ್ಸಿಡಿ ಎಷ್ಟು ? ಪುಟ್ಟಮ್ಮ ಗೋಳಾಡುವಂತಾಗಿದೆ.

ಬಡತನದ ಬೇಗೆಯಲ್ಲಿ ಬೇಯುತ್ತಿರುವ ಪುಟ್ಟಮ್ಮ ನಾಲ್ಕು ಸಣ್ಣ ಮಕ್ಕಳನ್ನು ಸಾಕಲು ಕೂಲಿಕೆಲಸ ಮಾಡುತ್ತಿದ್ದಾಳೆ. ಬ್ಯಾಂಕಿನ ಸಾಲವನ್ನು ವಜಾ ಮಾಡಿಸುವಂತೆ, ಭೂನ್ಯಾಯ ಮಂಡಲಿಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸುವಂತೆ, ಜಿಲ್ಲಾಧಿಕಾರಿಗಳು, ತಹಸಿಲ್ದಾರ್ ಅಸಿಸ್ಟೆಂಟ್ ಕಮೀಷನರ್ ಎಲ್ಲರಿಗೂ ಸುಮಾರು ಪತ್ರಗಳ ಮುಖೇನ ಮನವಿ ಮಾಡಿರುತ್ತಾಳೆ. ಆದರೂ ಈ ಕಣ್ಣೀರ ಕಥೆ ಕೊನೆಗೊಂಡಿರುವುದಿಲ್ಲ.

ವರದಿ : ಅ ಶಾನುಣ್ಣ

ನಮ್ಮ ಸುತ್ತಲೂನೂ

ಮಾನವತಾ ಸಮಾಜ ನಿರ್ಮಾಣಕ್ಕಾಗಿ ಅಂಬೇಡ್ಕರ್ ಚಿಂತನೆ ಬಳಸಲು ಕರೆ

ದಲಿತ ಜನಾಂಗ ವಿಚಾರವಂತರಾಗಿ ಅಂಬೇಡ್ಕರ್ ವಿಚಾರ ಧಾರೆಯನ್ನು ಹಳ್ಳಿಹಳ್ಳಿಗೂ ಮುಟ್ಟಿಸಬೇಕು. ಅಂಬೇಡ್ಕರರನ್ನು ಪೂಜಿಸುವುದರಿಂದ ಸಮಸ್ಯೆಗಳ ಪರಿಹಾರವಾಗದು. ಸುತ್ತಲಿನ ನೋವು ಅವಮಾನ–ಅನ್ಯಾಯಗಳ ವಿರುದ್ಧ ಸಂಘಟಿತರಾಗಿ ಹೋರಾಟ ನಡೆಸಬೇಕು, ಜಾತಿ ಅಸ್ಪೃಶ್ಯತೆ ಹಸಿವು ನೋವುಗಳಿರದ ಹೊಸ ಮಾನವತಾ ಸಮಾಜ ಕಟ್ಟಲು ಅಂಬೇಡ್ಕರ್ ನಮಗೆ ಮಾರ್ಗದರ್ಶಕರಾಗುತ್ತಾರೆ'' ಎಂದು ಪ್ರೊ॥ ಕೆ.ಸಿ. ಬಸವರಾಜು ಅವರು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮಂಗಳೂರು ಶಾಖೆಯ ಆಶ್ರಯದಲ್ಲಿ ತಾ ೧೪–೪–೮೨ರಂದು ಮಂಗಳೂರಿನ ಪೇಜಾವರದಲ್ಲಿ ನಡೆಸಿದ ಡಾ॥ ಬಿ.ಆರ್. ಅಂಬೇಡ್ಕರ್ ಅವರ ೯೧ನೇ ಜನ್ಮದಿನೋತ್ಸವ ಕಾರ್ಯಕ್ರಮದ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತಾ ಹೇಳಿದರು.

ದ.ಸಂ.ಸ. ದ.ಕ ಜಿಲ್ಲಾ ಸಂಚಾಲಕ ಬಿ, ರಾಮಕೃಷ್ಣ ಅವರು ದ.ಸಂ.ಸ. ಹುಟ್ಟು ಬೆಳವಣಿಗೆಯನ್ನು ವಿವರಿಸಿದರು. ಜಾತಿ-ಉಪಜಾತಿಗಳನ್ನು ನಾಶಪಡಿಸಿ ಮೂಢನಂಬಿಕೆಗಳನ್ನು ತೊರೆದು ಅಂಬೇಡ್ಕರ್ ಅವರ ವಿಚಾರಗಳನ್ನು ಕ್ರಿಯಾರೂಪಕ್ಕಿಳಿಸಿ ಹಲ್ಲೆ, ದೌರ್ಜನ್ಯ-ದಬ್ಬಾಳಿಕೆಗಳಿಲ್ಲದ ಹೊಸ ಮಾನವತಾ ವ್ಯವಸ್ಥೆಗಾಗಿ ಹೋರಾಡೋಣ ಎಂದು ಹೇಳಿದರು.

ಪಿ, ಕಮಲಾಕ್ಷರು ಅಂಬೇಡ್ಕರರ ಜೀವನ ಸಾಧನೆ, ಹೋರಾಟಗಳನ್ನು ವಿವರಿಸುತ್ತಾ ಅಂಬೇಡ್ಕರ್ ಹೋರಾಟದ ಮೂಲಕ ದಲಿತರ ಸ್ವಾಭಿಮಾನ ಬದುಕಿಗಾಗಿ ತಂದುಕೊಟ್ಟಿರತಕ್ಕಂತಹ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ವೈಚಾರಿಕ ಮಾರ್ಗದಲ್ಲಿ ಮುನ್ನಡೆಯೋಣ ಎಂದು ಹೇಳಿದರು.

ಎಡ್ವರ್ಡ್ ಫರ್ನಾಂಡಿಸ್ ಅವರು ಮಾತನಾಡುತ್ತಾ ಜಾತಿ ಅಸ್ಪೃಶ್ಯತೆಯನ್ನು ಹುಟ್ಟುಹಾಕಿದ ಜನರು ಧರ್ಮವನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಂಡಿದ್ದಾರೆ. ಮನುಷ್ಯ ನಿರ್ಮಿತ ಜಾತಿ-ಅಸ್ಪೃಶ್ಯತೆಯನ್ನು ಮನುಷ್ಯರೇ ನಿರ್ನಾಮ ಮಾಡಬೇಕಾಗಿದೆ. ಈ ದಿಶೆಯಲ್ಲಿ ಅಂಬೇಡ್ಕರ್ ಅವರ ವಿಚಾರಗಳನ್ನು ಕಾರ್ಯರೂಪಕ್ಕಿಳಿಸಿ ಮುನ್ನಡೆದಾಗ ಮಾತ್ರ ಈ ಜನ್ಮದಿನಾಚರಣೆಗಳಿಗೆ ಮಹತ್ವ ಬಂದೀತು ಎಂದರು.

ಸ್ಥಳೀಯರಾಗಿ ಮುಂಡಪ್ಪಕರ್ಕೇರ ಮತ್ತು ಶಿವರಾಮ ಅಂಚನ್ ಮಾತನಾಡಿದರು. ಜಿ.ಎಸ್. ಶೇಖರ ಸ್ವಾಗತಿಸಿದರು. ಎಂ. ದೇವದಾಸ್ ವಂದಿಸಿದರು, ದ.ಸಂ.ಸ. ಕಾರ್ಯಕರ್ತರಿಂದ ಹೋರಾಟದ ಹಾಡುಗಳ ಕಾರ್ಯಕ್ರಮ ನಡೆಯಿತು.

ವರದಿ : **ಜಿ.ಎಸ್ ಶೇಖರ,** ಮಂಗಳೂರು

ಗಂಗಾವತಿ ದಲಿತ ಸಂಘರ್ಷ ಸಮಿತಿ ಸಂಚಾಲಕನ ಮೇಲೆ

ಕಾಂಗ್ರೈ ಗೂಂಡಾಗಳ ಹಲ್ಲೆ: ಅಂಬೇಡ್ಕರ್ ವ್ಯಂಗ್ಯ

(ಮೊದಲ ಪುಟದಿಂದ)

ಚಪ್ಪಲಿಯಿಂದ ಹೊಡೆಸಿಕೊಳ್ಳುವಂತಹ ತಪ್ಪು ಮಾಡಿದ್ದೇನೆಂದರೆ ಕಾರಟಗಿ ಗ್ರಾಮದ ಸುಮಾರು ೧೨ ದಲಿತ ಕುಟುಂಬಗಳು ಸತತ ೩೦ ವರ್ಷಗಳಿಂದ ಮುಖ್ಯ ರಸ್ತೆಯ ಪಕ್ಕದ ಪಂಚಾಯತ ಜಾಗೆಯಲ್ಲಿ ವಾಸಿಸುತ್ತ ಬಂದಿದ್ದಾರೆ. ಇದು ನೀರಾವರಿ ಪ್ರದೇಶದ ದೊಡ್ಡ ಗ್ರಾಮವಾದ್ದರಿಂದ ದಿನೇ ದಿನೇ ವ್ಯಾಪಾರ ವ್ಯವಹಾರಗಳಲ್ಲಿ ಮುಂದು ವರಿಯುತ್ತಿದೆ. ಮುಖ್ಯ ರಸ್ತೆಯ ಎರಡೂ ಕಡೆ ಅಂಗಡಿಯ ಸಾಲು ಮಳಿಗೆಗಳಿವೆ. ಆ ದಲಿತರ ಗುಡಿಸಲುಗಳಿರುವುದೂ ಆ ಸಾಲುಗಳಲ್ಲೇ. ಹೀಗಾಗಿ ಆ ಗುಡಿಸಲುಗಳಿರುವ ಸ್ಥಳಕ್ಕೆ ಹೆಚ್ಚಿನ ಬೆಲೆ ಬಂದಿರುತ್ತದೆ. ಕಾರಣ ಆ ಗ್ರಾಮ ಪಂಚಾಯತಿಯ ಚೇರಮನ್ ಹಾಗೂ ಬಿ. ಡಿ. ಓ. ಸದಸ್ಯ ಶ್ವಾನ ಸ್ವಭಾವದ ಇವರಿಗೆ ಜೊಲ್ಲು ಸುರಿಯಲಾರಂಭಿಸಿತು. ಎಲ್ಲರೂ ಸೇರಿ ಉಪಾಯ ಹೂಡಿ ಬಿ. ಡಿ. ಓ. ರನ್ನು ಬುಟ್ಟಿಗೆ ಹಾಕಿಕೊಂಡು ಯಾವು ಯಾವುದೋ ವಿವರಣೆ ಕೊಟ್ಟು ಅಸಿಸ್ಟೆಂಟ್ ಕಮೀಷನರರಿಂದ ಆ ಗುಡಿಸಲುಗಳನ್ನು ಹೇಳುವಂತೆ ೧೯೮೧ ರ ನವೆಂಬರನಲ್ಲಿ ಸೂಚನೆ ಹೊರಡಿಸಿವರು.

ನಂತರದಲ್ಲಿ ದಲಿತರು ಗಂಗಾವತಿ ಶಾಖೆಯ ಸಂಘರ್ಷ ಸಮಿತಿಗೆ ಈ ಬಗ್ಗೆ ದೂರಿಕೊಂಡರು. ದಲಿತ ಸಂಘರ್ಷ ಸಮಿತಿಯ ಸಂಚಾಲಕರು ಈ ಬಗ್ಗೆ ವಿವರಿಸಿ ಕೂಡಲೇ ಗುಡಿಸಲು ಕಿತ್ತು ಊರ ಹೊರಗಿನ ಎರಡು ಮೈಲು ದೂರದ ಪ್ರದೇಶಕ್ಕೆ ಏಕಾ ಏಕಿ ಹೋಗಲಾಗುವುದಿಲ್ಲ, ಸರಿಯಾದ ರೀತಿಯಲ್ಲಿ ವಾಸಿಸಲು ಸೌಕರ್ಯ ಮಾಡಿಕೊಡಿ ಮತ್ತು ಅಷ್ಟು ದೂರದ ಜಾಗ ಬೇಡ ಸಮೀಪದಲ್ಲಿ ಯಾವುದಾದರೂ ಸ್ಥಳ ತೋರಿಸಬೇಕೆಂದು ಮನವಿ ಮಾಡಿಕೊಂಡರು. ನಂತರ ನಾಲ್ಕು ತಿಂಗಳವರೆಗೆ ಏನೂ ಮಾಡಲಿಲ್ಲ. ಸ್ಥಗಿತಗೊಂಡವರು ಇದ್ದಕ್ಕಿದ್ದಂತೆ ತಾ : ೨೩. ೪. ೮೨ರಂದು ಬಿ. ಡಿ. ಓ. ಗಂಗಾವತಿ ನೇತೃತ್ವದಲ್ಲಿ ಟಿ.ಡಿ ಬಿ. ದುರಗಪ್ಪ ಪಂಚಾಯತ ಚೇರ್‌ಮನ್ ದಬ್ಬಾಳಿಕೆಯಿಂದ ಗುಡಿಸಲೊಳಗಿನ ಸಾಮಾನುಗಳನ್ನು ರಸ್ತೆಗೆಸೆದರು. ನಂತರ ಗುಡಿಸಲುಗಳನ್ನು ನೆಲ ಸಮ ಮಾಡಿದರು. ಕೂಡಲೇ ಗುಡಿಸಲು ನಿವಾಸಿಯೊಬ್ಬ ಗಂಗಾವತಿಗೆಧಾವಿಸಿ ದಲಿತ ಸಂಘರ್ಷ ಸಮಿತಿ ಸಂಚಾಲಕ ಭಾಗ್ಯವಂತರನ್ನು ಕರೆದೊಯ್ದನು. ಬೋಳು ತಲೆಯ ಬಿ. ಡಿ. ಓ. ದಲಿತರನ್ನು ಸುಡು ಬಿಸಿಲಿನ ಪಾಲು ಮಾಡಿ ಅಂಗಡಿಯೊಂದರ ಫ್ಯಾನ ಕೆಳಗೆ ಕೂತಿದ್ದನು. ಭಾಗ್ಯವಂತ ಹೋಗಿ,ಈ ರೀತಿ ಮುನ್ಸೂಚನೆ ಕೊಡದೆ ಬೇರೆಡೆ ವಾಸಿಸಲು ಸೌಕರ್ಯ ಮಾಡಿಕೊಡದೆ ದಲಿತರ ಮೇಲೆ ದಬ್ಬಾಳಿಕೆ ಮಾಡಿದ್ದೇಕೆ ಎಂದು ಪ್ರಶ್ನಿಸಿಲು "ಅದೊಂದೂ ನನಗೆ ಗೊತ್ತಿಲ್ಲ, ಅಸಿಸ್ಟೆಂಟ್ ಕಮೀಷನರ್ ಆದೇಶದ ಮೇರೆಗೆ ಈ ರೀತಿ ಮಾಡಿದ್ದು ಅವರನ್ನೇ ಕೇಳು ಹೋಗು" ಎಂದನು. ಅಷ್ಟರಲ್ಲಿ ಪಂಚಾಯತ ಚೇರ್‌ಮನ್ ಬಿ. ಡಿ. ಓ. ಸದಸ್ಯ ತಮ್ಮ ಗೂಂಡಾಗಳೊಂದಿಗೆ ಅಂಗಡಿಯಲ್ಲಿ ಘೇರಾಯಿಸಿದರು. ಗದ್ದಲ ಆಗುವುದನ್ನು ಕಂಡು ಸಂಚಾಲಕರು ಇಲ್ಲಿ ಚರ್ಚಿಸುವುದು ಬೇಡ,ಪಂಚಾಯ್ತಿ ಕಾರ್ಯಾಲಯಕ್ಕೆ ಹೋಗೋಣ ಅಲ್ಲಿಗೆ ನಡೆಯಿರಿ ಎಂದು ಬಿ. ಡಿ. ಓ. ರನ್ನು ಒತ್ತಾಯಿಸಲು ಬಿ. ಡಿ. ಓ. ದುಷ್ಟ ದುರಗಪ್ಪ "ಅದ್ಯಾವುದು ಅದು ದಲಿತ್ರ ಸಂಘ? ಬರೆಲ್ಲ ಲಂಚಾ ತಿನ್ನೋದ್ಕೆ ಕಟ್ಕೊಂಡದ್ದು, ಈ ಊರಿನ ಮುಖಂಡ್ರು ನಾವೆ, ನಾವೇ ಇಲ್ಲಿ ಏನಾದ್ರೂ ನಡೆದ್ರೆ ತೀರ್ಮಾನಿಸೋದ ಇಲ್ಲಿ ಬಂದ ಲೀಡರ್ಕಿ ಮಾಡಾಕ್ ಬರ್ತಿ ಏನ್ಲೆ? ಎಂದು ಬಯ್ಯುವುದರೊಂದಿಗೆ ಚಪ್ಪಲಿಯಿಂದ ಹೊಡೆದು ಜಗ್ಗಾಡಿ ಶರ್ಟು ಹರಿದನು,ಅಲ್ಲದೇ"ಇನ್ನೊಮ್ಮೆ ಕಾಲಿಟ್ರೆ ಕಾಲ್ಮುರಿತೀವಿ" ಎಂದು ಧಮ್ಕಿ ಹಾಕಿದನು.

ಒಬ್ಬನೇ ಅಸಹಾಯಕನಾಗಿ ಏನೂಮಾಡದೇ ಉಕ್ಕಿದ ರೋಷವನ್ನು ನುಂಗಿಕೊಂಡು ಗಂಗಾವತಿಗೆ ಬಂದು ಪೋಲಿಸ್ ಸ್ಟೇಷನ್‌ಗೆ ಹಲ್ಲೆ ಪ್ರಕರಣ ವಿವರಿಸಿ ದೂರು ಕೊಟ್ಟನು. ಮತ್ತು ಎ. ಸಿ. ಡಿ. ಸಿ. ಯವರಿಗೆ ದೌರ್ಜನ್ಯಕ್ಕೆ ತಕ್ಕ ಕ್ರಮ ಕೈಕೊಳ್ಳಬೇಕೆಂದು ಒತ್ತಾಯಿಸಿ ಮನವಿ ಮಾಡಿಕೊಂಡನು.

ಈ ಹಲ್ಲೆಯನ್ನು ಗಂಗಾವತಿಯ ಪ್ರಾಂತ ರೈತ ಸಂಘ ಹಾಗೂ ಎಸ್. ಎಫ್. ಐ. ನ ಶಾಖೆಗಳು ತೀವ್ರವಾಗಿ ಖಂಡಿಸಿವೆ. ಇಂತಹ ದುಷ್ಟರಿಂದ ಜನ್ಮ ದಿನೋತ್ಸವ ಆಚರಿಸಿಕೊಳ್ಳುವ ಡಾ : ಬಿ. ಆರ್ ಅಂಬೇಡ್ಕರರು ಇಂದಿಗೂ ಬದುಕಿದ್ದಲ್ಲಿ ಅವರ ಪರಿಸ್ಥಿತಿ ಏನಾಗುತ್ತಿತ್ತೊ, ಎಂದು ನೆನೆಸಿಕೊಂಡರೆ ಮಿದುಳಿನಲ್ಲಿ ಗರಗಸವನ್ನಿಟ್ಟಂತಾಗುತ್ತದೆ. ....

ಕಪ್ಪು ಶಿಕ್ಷಣ

ಶಾಶ್ವತವಾದ ಸ್ಥಿತಿ ಪ್ರಾಣಿಗಳಂತೆ ಕೆಳಮಟ್ಟ ಬದುಕುವುದು ಎಂದು ಸ್ಥಾಪಿಸುವುದು"

ದಕ್ಷಿಣ ಆಫ್ರಿಕಾದ ಶಿಕ್ಷಣ ರೀತಿ ಸೃಜನಾತ್ಮಕ ಚಟುವಟಿಕೆಗೆ ಉತ್ತೇಜನ ನೀಡುವುದಿಲ್ಲ. ವ್ಯಕ್ತಿಯ ಪ್ರತಿಭೆಯನ್ನು ವಿಕಾಸಗೊಳಿಸುವುದಿಲ್ಲ. ರಾಷ್ಟ್ರೀಯ ಆರ್ಥಿಕತೆಯ ಬೆಳವಣಿಗೆಯ ಮೇಲೆ ಪ್ರಭಾವ ಬೀರುವುದಿಲ್ಲ. ಅದರ ಬದಲು ಕಪ್ಪುಕಾರ್ಮಿಕನ ಯಂತ್ರದ ಸಹಾಯಕ ಅಂಗವನ್ನಾಗಿ ಪರಿವರ್ತಿಸುವ, ಅವನು ಏಕಾತ್ಮಕ ಒಂದೇ ಬಗೆಯ ಸರಳ ಜೀವನವನ್ನು ನಡೆಸಲು ಯೋಗ್ಯನಾಗುವಂತೆ ಮಾಡುವುದೇ ಅದರ ಉದ್ದೇಶವಾಗಿದೆ.

ಹಾಗಾಗಿ ಕಪ್ಪುಕಾರ್ಮಿಕ ತನ್ನ ಜೀವನದ ಉದ್ದಕ್ಕೂ ಏಳಿಗೆ ಪಡೆಯದೆ ಬದುಕಿನ ಏಣಿಯ ಕೆಳಹಂತದಲ್ಲೇ ಬದುಕುವಂತಾಗಿದೆ. ಬಹುತೇಕವಾಗಿ ನಿರುದ್ಯೋಗಿ ಕಾರ್ಮಿಕರೇ ಹೆಚ್ಚುವರಿ ಅದನ್ನು ತಲೆಗೆ ಹಚ್ಚಿಕೊಳ್ಳುವುದಿಲ್ಲ! ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದಷ್ಟು ದೊಡ್ಡ ಬಂಡವಾಳಶಾಹಿ ಬಿಳಿಯರಿಗೆ ಖುಸಿ. ಅಗ್ಗದ ಬೆಲೆಗೆ ಕಾರ್ಮಿಕರು ಮುಗಿ ಬೀಳುತ್ತಾರಲ್ಲ.

ಶಿಕ್ಷಣ ಮತ್ತು ಆರ್ಥಿಕತೆಯ ನಡುವಣ **ಸಂಬಂಧ ತಾಂತ್ರಿಕ ಸಮಸ್ಯೆಯೊಂದೇ ಅಲ್ಲ.** ಇದು ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯನ್ನೇ ಪ್ರಶ್ನಿಸುತ್ತದೆ.

ದಲಿತ ಐಕ್ಯತಾ ದಿನ

ತಾ॥ ೧೪–೪–೮೨ರಂದು ಚಿಕ್ಕಮಗಳೂರಿನ ದ.ಸಂ.ಸ. ಜಿಲ್ಲಾ ಶಾಖೆಯ ಆಶ್ರಯದಲ್ಲಿ ಬೆಳ್ಳಿಗ್ಗೆ ರಾಜ್ಯಸಂಚಾಲಕ ಎಂ.ಡಿ. ಗಂಗಯ್ಯನವರ ಅಧ್ಯಕ್ಷತೆಯಲ್ಲಿ ದಲಿತ ಐಕ್ಯತಾ ದಿನವನ್ನಾಗಿ ಡಾ॥ ಬಿ. ಆರ್, ಅಂಬೇಡ್ಕರ್‌ರವರ ಜನ್ಮದಿನವನ್ನು ಆಚರಿಸಲಾಯಿತು. ದೇಶವ್ಯಾಪ್ತಿ ಬಡತನ, ಕೊಲೆ ಅತ್ಯಾಚಾರ, ಹಿಂಸೆಗಳಿಂದ ಬಡವರು ಸಾವಿನದವಡೆಯಲ್ಲಿದ್ದು ರಾಜಕೀಯ ಸ್ವಾರ್ಥ. ಜಾತಿದೇವರು, ಧರ್ಮಗಳ ಸಣ್ಣತನಗಳಿಂದ ದಿಕ್ಕಾಪಾಲಾಗಿರುವ ದಲಿತರು ಒಂದಾಗುಹಲ್ಲಿ ಅಂಬೇಡ್ಕರ್ ಜನ್ಮದಿನ ದಲಿತ ಐಕ್ಯತಾ ದಿನವಾಗಬೇಕೆಂದು ಹೇಳಲಾಯಿತು.

ಚಪ್ಪಲಿ ಮಾಡುವ ಕೈಗೆ ಚಪ್ಪಲಿ ಬಂದಾವು ಎಚ್ಚರ !

6ನೇ ಪುಟದಿಂದ

ಕಾರದ ಘೋಷಣೆ ಕೂಗಬೇಕೆಂದರು. ಯಾಕೊ ಯಾರೂ ಘೋಷಣೆ ಕೂಗುವ ಸ್ಥಿತಿಯಲ್ಲಿರದೆ ಅವಷ್ಟು ಅವರಿಗೆ ಹತ್ತಿರವಾಗುತ್ತಾ ಕೈಕಾಲುಕಿ ತಬ್ಬಿಕೊಂಡು ತಮ್ಮಲ್ಲಿ ತುಂಬಿಕೊಳ್ಳುತ್ತಿದ್ದರು.

ನಂತರ ನಮ್ಮ ಗಡ್ಡದ ಕಾರ್ಯಕರ್ತ ಚಿತ್ರ ಹಿಂಸೆಯ ಸುದ್ದಿ ತಿಳಿಸಿದ. ಆ ವೇಳೆಗೆ ವಿಧಾನ ಸಭೆಯ ಅಧಿವೇಶನ ಮುಗಿದುಹೋಗಿತ್ತು. ಯಾರು ಈ ಹುಡುಗರಿಗೆ ಶಿಕ್ಷೆ ವಿದಿಸಿದ್ದರೋ ಅವರೆಲ್ಲಾ ಬೆಂಗಳೂರಿನ ಭೋಗದ ಕೊನೆಯ ಹನಿಯನ್ನೂ ಹೀರ್ಕಿಕೊಂಡು ಇಲ್ಲಿಂದ ಕಾಲು ಕಿತ್ತಿದ್ದರು. ನಾನು ಇನ್ನೂ ನಡೆಯುತ್ತಿದ್ದ ವಿಧಾನಪರಿಷತ್ತಿಗೆ ಓಡಿ ವಿರೋಧ ಪಕ್ಷದ ಕೆಲವು ಸದಸ್ಯರಿಗೆ ವಿಷಯ ತಿಳಿಸಿದೆ. ಬಿ.ಜೆ. ಪಿ.ಯ ಸುಬ್ಬಯ್ಯ ಇದನ್ನು ಪ್ರಸ್ತಾಪಿಸಿ ಪೋಲೀಸರು ತಮ್ಮ ರಾಕ್ಷಸ ವರ್ತನೆಯಿಂದ ಸಭೆಗೆ ಅವಮಾನ ಮಾಡಿದ್ದಾರೆಂದು, ಸಭಾಪತಿಗಳ ಮಾತಿಗೆ ಮೂರುಕಾಸಿನ ಮರ್ಯಾದೆ ಕೂಡ ಇಲ್ಲವೆಂದು ಇದರಿಂದ ತಿಳಿದುಬರುತ್ತದೆ ಎಂದು ದೂರಿದರು. ಘೋಷಣೆ ಕೂಗಿದ ಹುಡುಗರನ್ನು ಕೇಡಿಗಳಂತೆ ನಡೆಸಿಕೊಳ್ಳುವುದು ಯಾತರ ನ್ಯಾಯ ಎಂದು 'ಆಕ್ಷೇಪಿಸಿದರು. ಸಭಾಧ್ಯಕ್ಷೆ ಬಸವರಾಜೇಶ್ವರಿ ಸಭಾಪತಿಗಳೊಂದಿಗೆ ಕೂಡಲೆ ಮಾತಾಡಿ ಕ್ರಮ ಕೈಗೊಳ್ಳುವೆ ಎಂದು ಭರವಸೆ ಕೊಟ್ಟರು.

ಇದಾಗಿ ಇನ್ನೇನು ತಿಂಗಳೇ ಉರುಳಿದೆ. ಸಂಘರ್ಷಸಮಿತಿ ಕೂಡ ಸಭಾಪತಿಗಳಿಗೆ ರಿಜಿಸ್ಟರ್ಡ್ ಅಂಚೆ ಮೂಲಕ ಮನವಿಯ ಮೇಲೆ ಮನವಿ ಸಲ್ಲಿಸಿದೆ. ಇಂದಿರಾಗಾಂಧಿಯ ಈ ಕೊಲೆಗಡುಕ ಕೈ, ಈಕೆಯ ಸೀರೆಯ ಹಿಂದೆ ಅಡಗಿಕೊಂಡ ನಮ್ಮ ದಲಿತ ಶಾಸಕರೆಂಬ ಗುಲಾಮರ ಪಿತೂರಿಯಿಂದ ನಮ್ಮ ಒಬ್ಬ ಕಾರ್ಯಕರ್ತನ ಕಿವಿ ಹಾಳಾಗಿರಬಹುದು. ಆದರೆ ಆತ ಅವತ್ತು ವಿಧಾನ ಸಭೆಯ ಗ್ಯಾಲರಿಯಲ್ಲಿ ಕೂಗಿದ ಧಿಕ್ಕಾರದ ಕೂಗು ಕೋಟಿ ಕೋಟಿ ದಲಿತರ ಕಿವಿ ತಲುಪುವುದರಲ್ಲಿ ನಮಗೆ ಸಂದೇಹ ಇಲ್ಲ. ಆದಾದ ಕೂಡಲೆ ದಲಿತ ಸಮುದಾಯದ ಉಳಿದೆಲ್ಲ ಇಂದ್ರಿಯಗಳು ಕೂಡ ಜಾಗೃತಗೊಳ್ಳುತ್ತವೆ. ಚಪ್ಪಲಿ ಮಾಡುವ ಕೈಗಳು ಚಪ್ಪಲಿ ಕೈಗೆತ್ತಿಕೊಳ್ಳುವ ದಿನಗಳು ಇನ್ನೇನು ಒಂದೇಬರುತ್ತವೆ.

ಭೂಮಿ ನುಂಗಲು ಗಂಗಾವತಿ ಭೂಮಾಲೀಕರ ಸನ್ನಾಹ

ರಾಯಚೂರು ಜಿಲ್ಲೆ ಗಂಗಾವತಿ ತಾಲ್ಲೂಕಿನಲ್ಲಿ ಸಾಕಷ್ಟು ಸರ್ಕಾರಿ ಭೂಮಿಯಿದ್ದರೂ ಅದನ್ನು ಭೂರಹಿತರಿಗೆ ಹಂಚುವಲ್ಲಿ, ಅನೇಕ ಅಕ್ರಮಗಳು ನಡೆದಿವೆ, ಭೂಮಿಗಾಗಿ ಇಲ್ಲಿನ ಭೂರಹಿತ ದಲಿತರು ಅನೇಕ ಅರ್ಜಿಗಳನ್ನು ಕೊಟ್ಟಿದ್ದರೂ ಅವು ಕಸದ ಬುಟ್ಟಿ ಸೇರಿವೆ. ಭೂಮಿ ಕೇಳಿ ದಲಿತರು ದ.ಸಂ.ಸ. ನೇತೃತ್ವದಲ್ಲಿ ಧರಣಿ ಕೂತರು. ತಾಲ್ಲೂಕಾಫೀಸಿನ ಅಕ್ರಮಗಳ ವಿರುದ್ಧ ಧರಣಿ ಕುಂತದ್ದಕ್ಕೆ ತಾಸೀಲ್ದಾರರು ಕೆರಳಿ ಕೆಂಡವಾದರು.

ಸರ್ಕಾರಿ ಭೂಮಿಯನ್ನು ನುಂಗಿಹಾಕಲು ಭೂಮಾಲೀಕರ ಪ್ರಯತ್ನಗಳು ನಡೆದಿವೆ. ಇದಕ್ಕೆ ಷಾಮೀಲಾಗಿರುವ ತಾಸೀಲ್ದಾರರು ಬಡವರಿಗೆ ಭೂಮಿ ಹಂಚಲಾರದವರಾಗಿದ್ದಾರೆ,

ತಾಸೀಲ್ದಾರರ ನಿಷ್ಕ್ರಿಯತೆಯನ್ನು ವಿರೋಧಿಸಿ ಭೂಮಿ ಹಂಚುವಂತೆ ಒತ್ತಾಯಿಸಿ ಗಂಗಾವತಿ ತಾಲ್ಲೂಕು ದ.ಸಂ.ಸ. ಶಾಖೆಯು 30-೪-೮೨ರಂದು ಅಂಬೇಡ್ಕರ್ ಜಯಂತಿ ಆಚರಿಸುವುದಾಗಿ ಕರಪತ್ರ ಹೊರಡಿಸಿದರು. ಗೋಕಾಕ್‌ವರದಿ ಹಿನ್ನೆಲೆಯಲ್ಲಿ ೨೫-೪-೮೨ ರವರೆಗೆ ಜಾರಿಯಲ್ಲಿದ್ದ ೧೪೪ ಸೆಕ್ಷನ್ನನ್ನು ಮತ್ತೊಂದು ವಾರದವರೆಗೆ ವಿಸ್ತರಿಸಲಾಯಿತು. ಇದು ದ.ಸಂ.ಸ. ಆಚರಿಸಬೇಕಾಗಿದ್ದ ಅಂಬೇಡ್ಕರ್ ಜಯಂತಿಗೆ ತಡೆಯಾಯಿತು. ಆದರೆ ೨೮-೪-೮೨ರಂದು ನಿಷೇಧಾಜ್ಞೆ ಜಾರಿಯಲ್ಲಿದ್ದರೂ ಬಸವ ಜಯಂತಿ ಆಚರಿಸಲು ಮೇಲ್ಕಂಡ ಕುತಂತ್ರಗಾರ ತಾಸೀಲ್ದಾರರು ಪರವಾನಗಿ ನೀಡಿದ್ದರು.

ಮೇಲ್ಜಾತಿಯ ಕ್ರೂರ ಅಧಿಕಾರಿಗಳಿಗೆ ದ.ಸಂ,ಸ. ಹೋರಾಟದ ಮೂಲಕ ಪಾಠ ಕಲಿಸಬೇಕಾಗಿದೆ ಅಷ್ಟೆ.

–ಭಾಗ್ಯವಂತ

ನಿಮ್ಮ ದೇವರಿಗೆ ನಮಸ್ಕಾರ!

"ಅಸ್ಪೃಶ್ಯನ ಹಣವನ್ನು ನೀವು ಕಸಿವಿಸಿಯಿಲ್ಲದೆ ತೆಗೆದುಕೊಳ್ಳುತ್ತೀರಿ. ಅಸ್ಪೃಶ್ಯನೊಬ್ಬ ದೇವಸ್ಥಾನ ಕಟ್ಟಿಸಿದರೆ, ನೀವು ಕುಟುಂಬ ಪರಿವಾರ ಸಮೇತ ಅಲ್ಲಿಗೆ ಹೋಗುತ್ತೀರಿ. ದೇವಸ್ಥಾನದಲ್ಲಿ ದೇವರ ಪ್ರತಿಷ್ಠೆ ಮಾಡುತ್ತೀರಿ. ಎಲ್ಲವನ್ನು ಕಬಳಿಸುತ್ತೀರಿ—ಅಸ್ಪೃಶ್ಯ ಅದನ್ನು ಮುಟ್ಟಿರದೆ ಇದ್ದಲ್ಲಿ ಮಾತ್ರ ದಕ್ಷಿಣೆ ತೆಗೆದು ಕೊಳ್ಳುತ್ತೀರಿ; ಇದರಲ್ಲಿ ಯಾವ ಪಾಪವೂ ಇಲ್ಲ; ಇರಕೂಡದು. ಆದರೆ ಅಸ್ಪೃಶ್ಯ ದೇವಾಲಯದೊಳಗೆ ಮಾತ್ರ ಕಾಲಿರಿಸುವಂತಿಲ್ಲ; ಹಾಗೆ ಮಾಡಿದರೆ ದೇವರು ಅಪವಿತ್ರನಾಗಿ ಬಿಡುತ್ತಾನೆ. ಇತರರ ಸ್ಪರ್ಶಮಾತ್ರದಿಂದಲೇ ಅಪವಿತ್ರನಾಗಿ ಬಿಡುವಷ್ಟು ನಿಮ್ಮ ದೇವರು ನಿರ್ಬಲನಾಗಿದ್ದರೆ... ಅವನಿಗೆ ದೂರದಿಂದಲೇ ನನ್ನ ನಮಸ್ಕಾರ.

(ಅನು : ಡಿ.ವಿ.ಕೆ.) –ಪ್ರೇಮಚಂದ್

ಹಳ್ಳಿಗಾಡಲ್ಲಿ ಅಂಬೇಡ್ಕರ್ ರೋಮಾಂಚನ

ಅಂಬೇಡ್ಕರ್ ಹೆಸರು ತುಂಬ ತಡವಾಗಿಯಾದರೂ ಹಳ್ಳಿಗಾಡ ಗುಡಿಸಲುಗಳಲ್ಲಿ ಮೊಳಗತೊಡಗಿದೆ. ಹಸಿವು, ದಾರಿದ್ರ್ಯಗಳಿಂದ ಹುದುಗಿಹೋಗಿದ್ದ ದಲಿತರಿಗೆ ಅಂಬೇಡ್ಕರ್ ಹೆಸರೇ ಅತ್ಯಂತ ರೋಮಾಂಚನವನ್ನು ಉಂಟುಮಾಡತೊಡಗಿದೆ.

ಇತ್ತೀಚೆಗೆ ಕೋಲಾರದ ಕೈಯಳತೆಯಲ್ಲೇ ಇರುವ ಅರಹಳ್ಳಿ ಎನ್ನುವ ಊರಲ್ಲಿ ಸವರ್ಣೀಯರು ಒಂದು ಬಯಲಾಟ ಏರ್ಪಡಿಸಿದ್ದರು. ಬಯಲಾಟದ ನಡುವೆ ತೂಕಡಿಸುತ್ತಿದ್ದ ಮೈಕಿನಲ್ಲಿ ಕೆಲವು ಕಿಡಿಗೇಡಿ ಸವರ್ಣೀಯರು 'ಅಂಬೇಡ್ಕರ್‌ಗೆ ಧಿಕ್ಕಾರ' ಎಂದು ಕಿರುಚಿದರು ಈ ಕಿಡಿಗೇಡಿಗಳು ಮುಂದಿನ ಯಾವುದೇ ಪರಿಣಾಮವು ಕುರಿತು ಯೋಚಿಸಿರಲಿಲ್ಲವೆನಿಸುತ್ತದೆ! ಈ ಧಿಕ್ಕಾರ ಕಿವಿಗೆ ಬಿದ್ದಿದ್ದೆ ತಡ ಸಿಟ್ಟಿಗೆದ್ದ ಯುವಕರ ತಂಡವೊಂದು ರಂಗಕ್ಕೆ ಜಿಗಿದು ಅಂಬೇಡ್ಕರ್‌ರವರನ್ನು ಧಿಕ್ಕರಿಸಿದ ಸವರ್ಣೀಯ ಕಿಡಿಗೇಡಿಗಳ ಕೊರಳು ಪಟ್ಟಿ ಜಗ್ಗಿ ಎಳೆದು ಸಕತ್ತಾಗಿ ಲಾತ ಇಕ್ಕಿದರು. ಈ ಲಾತಾದ ನೋವು ಇರುವವರೆಗೂ ಅಂಬೇಡ್ಕರ್ ನೆನಪು ಕೂಡ ಉಳಿಯುವುದರಿಂದ ದಲಿತ ಯುವಕರು ಇಂಥ ಕಿಡಿಗೇಡಿಗಳಿಗೆ ಆಗಾಗ ಲಾತ ಕೊಡುತ್ತಾ ಅಂಬೇಡ್ಕರ್‌ರವರನ್ನು ನೆನಪು ಮಾಡಿಕೊಡುತ್ತಿರಬೇಕು.

ಗಂಗಾವತಿ ದಲಿತ ಸಂಘರ್ಷ ಸಮಿತಿ ಸಂಚಾಲಕನ ಮೇಲೆ

ಕಾಂಗ್ರೆ ಗೂಂಡಾಗಳ ಹಲ್ಲೆ: ಅಂಬೇಡ್ಕರ್ ವ್ಯಂಗ್ಯ

(ಮೊದಲ ಪುಟದಿಂದ)

ಚಪ್ಪಲಿಯಿಂದ ಹೊಡೆಸಿಕೊಳ್ಳುವಂತಹ ತಪ್ಪು ಮಾಡಿದ್ದೇನೆಂದರೆ ಕಾರಟಗಿ ಗ್ರಾಮದ ಸುಮಾರು ೧೨ ದಲಿತ ಕುಟುಂಬಗಳು ಸತತ ೩೦ ವರ್ಷಗಳಿಂದ ಮುಖ್ಯ ರಸ್ತೆಯ ಪಕ್ಕದ ಪಂಚಾಯತ ಜಾಗೆಯಲ್ಲಿ ವಾಸಿಸುತ್ತ ಬಂದಿದ್ದಾರೆ. ಇದು ನೀರಾವರಿ ಪ್ರದೇಶದ ದೊಡ್ಡ ಗ್ರಾಮವಾದ್ದರಿಂದ ದಿನೇ ದಿನೇ ವ್ಯಾಪಾರ ವ್ಯವಹಾರಗಳಲ್ಲಿ ಮುಂದು ವರಿಯುತ್ತಿದೆ. ಮುಖ್ಯ ರಸ್ತೆಯ ಎರಡೂ ಕಡೆ ಅಂಗಡಿಯ ಸಾಲು ಮಳಿಗೆಗಳಿವೆ. ಆ ದಲಿತರ ಗುಡಿಸಲು ಗಳಿರುವುದೂ ಆ ಸಾಲುಗಳಲ್ಲೇ. ಹೀಗಾಗಿ ಆ ಗುಡಿಸಲುಗಳಿರುವ ಸ್ಥಳಕ್ಕೆ ಹೆಚ್ಚಿನ ಬೆಲೆ ಬಂದಿರುತ್ತದೆ. ಕಾರಣ ಆ ಗ್ರಾಮ ಪಂಚಾಯತಿಯ ಚೇರಮನ್ ಹಾಗೂ ಬಿ. ಡಿ. ಓ. ಸದಸ್ಯ ಶ್ವಾನ ಸ್ವಭಾವದ ಇವರಿಗೆ ಜೊಲ್ಲು ಸುರಿಯಲಾರಂಭಿಸಿತು. ಎಲ್ಲರೂ ಸೇರಿ ಉಪಾಯ ಹೂಡಿ ಬಿ. ಡಿ. ಓ. ರನ್ನು ಬುಟ್ಟಿಗೆ ಹಾಕಿಕೊಂಡು ಯಾವು ಯಾವುದೋ ವಿವರಣೆ ಕೊಟ್ಟು ಅಸಿಸ್ಟೆಂಟ್ ಕಮೀಷನರರಿಂದ ಆ ಗುಡಿಸಲುಗಳನ್ನು ಹೇಳುವಂತೆ ೧೯೮೧ ರ ನವೆಂಬರನಲ್ಲಿ ಸೂಚನೆ ಹೊರಡಿಸಿದರು.

ನಂತರದಲ್ಲಿ ದಲಿತರು ಗಂಗಾವತಿ ಶಾಖೆಯ ಸಂಘರ್ಷ ಸಮಿತಿಗೆ ಈ ಬಗ್ಗೆ ದೂರಿಕೊಂಡರು. ದಲಿತ ಸಂಘರ್ಷ ಸಮಿತಿಯ ಸಂಚಾಲಕರು ಈ ಬಗ್ಗೆ ವಿವರಿಸಿ ಕೂಡಲೇ ಗುಡಿಸಲು ಕಿತ್ತು ಊರ ಹೊರಗಿನ ಎರಡು ಮೈಲು ದೂರದ ಪ್ರದೇಶಕ್ಕೆ ಏಕಾ ಏಕಿ ಹೋಗಲಾಗುವುದಿಲ್ಲ, ಸರಿಯಾದ ರೀತಿಯಲ್ಲಿ ವಾಸಿಸಲು ಸೌಕರ್ಯ ಮಾಡಿಕೊಡಿ ಮತ್ತು ಅಷ್ಟು ದೂರದ ಜಾಗ ಬೇಡ ಸಮೀಪದಲ್ಲಿ ಯಾವುದಾದರೂ ಸ್ಥಳ ತೋರಿಸಬೇಕೆಂದು ಮನವಿ ಮಾಡಿಕೊಂಡರು. ನಂತರ ನಾಲ್ಕು ತಿಂಗಳವರೆಗೆ ಏನೂ ಮಾಡಲಿಲ್ಲ. ಸ್ಥಗಿತಗೊಂಡವರು ಇದ್ದಕ್ಕಿದ್ದಂತೆ ತಾ : ೨೩. ೪. ೮೨ರಂದು ಬಿ. ಡಿ. ಓ. ಗಂಗಾವತಿ ನೇತೃತ್ವದಲ್ಲಿ ಟಿ.ಡಿ ಬಿ. ದುರಗಪ್ಪ ಪಂಚಾಯತ ಚೇರ್‌ಮನ್ ದಬ್ಬಾಳಿಕೆಯಿಂದ ಗುಡಿಸಲೊಳಗಿನ ಸಾಮಾನುಗಳನ್ನು ರಸ್ತೆಗೆಸೆದರು. ನಂತರ ಗುಡಿಸಲುಗಳನ್ನು ನೆಲಸಮ ಮಾಡಿದರು. ಕೂಡಲೇ ಗುಡಿಸಲು ನಿವಾಸಿಯೊಬ್ಬ ಗಂಗಾವತಿಗೆಧಾವಿಸಿ ದಲಿತ ಸಂಘರ್ಷ ಸಮಿತಿ ಸಂಚಾಲಕ ಭಾಗ್ಯವಂತರನ್ನು ಕರೆದೊಯ್ದನು. ಬೋಳು ತಲೆಯ ಬಿ. ಡಿ. ಓ. ದಲಿತರನ್ನು ಸುಡು ಬಿಸಿಲಿನ ಪಾಲು ಮಾಡಿ ಅಂಗಡಿಯೊಂದರ ಧ್ಯಾನ ಕೆಳಗೆ ಕೂತಿದ್ದನು. ಭಾಗ್ಯವಂತ ಹೋಗಿ,ಈ ರೀತಿ ಮುನ್ಸೂಚನೆ ಕೊಡದೆ ಬೇರೆಡೆ ವಾಸಿಸಲು ಸೌಕರ್ಯ ಮಾಡಿಕೊಡದೆ ದಲಿತರ ಮೇಲೆ ದಬ್ಬಾಳಿಕೆ ಮಾಡಿದ್ದೇಕೆ ಎಂದು ಪ್ರಶ್ನಿಸಲು "ಆದೊಂದೂ ನನಗೆ ಗೊತ್ತಿಲ್ಲ, ಅಸಿಸ್ಟೆಂಟ್ ಕಮೀಷನರ್ ಆದೇಶದ ಮೇರೆಗೆ ಈ ರೀತಿ ಮಾಡಿದ್ದು ಅವರನ್ನೇ ಕೇಳು ಹೋಗು'' ಎಂದನು. ಅಷ್ಟರಲ್ಲಿ ಪಂಚಾಯತ ಚೇರ್‌ಮನ್ ಬಿ. ಡಿ. ಓ. ಸದಸ್ಯ ತಮ್ಮ ಗೂಂಡಾಗಳೊಂದಿಗೆ ಅಂಗಡಿಯಲ್ಲಿ ಹೇರಾಯಿಸಿದರು. ಗದ್ದಲ ಆಗುವುದನ್ನು ಕಂಡು ಸಂಚಾಲಕರು ಇಲ್ಲಿ ಚರ್ಚಿಸುವುದು ಬೇಡ,ಪಂಚಾಯ್ತು ಕಾರ್ಯಾಲಯಕ್ಕೆ ಹೋಗೋಣ ಅಲ್ಲಿಗೆ ನಡೆಯಿರಿ ಎಂದು ಬಿ. ಡಿ. ಓ. ರನ್ನು ಒತ್ತಾಯಿಸಲು ಬಿ. ಡಿ. ಓ. ದುಷ್ಟ ದುರಗಪ್ಪ "ಅದ್ಯಾವುದು ಅದು ದಲಿತ್ರ ಸಂಘ ? ಬರಲ್ಲ ಲಂಚಾ ತಿನ್ನೋದ್ಕೆ ಕಟ್ಕೊಂಡದ್ದು, ಈ ಊರಿನ ಮುಖಂಡ್ರು ನಾವೆ, ನಾವೇ ಇಲ್ಲಿ ಏನಾದ್ರೂ ನಡೆದ್ರೆ ತೀರ್ಮಾನಿಸೋದ ಇಲ್ಲಿ ಬಂದ ಲೀಡರ್ಕಿ ಮಾಡಾಕ್ ಬರ್ತಿ ಏನ್ಲೆ ? ಎಂದು ಬಯ್ಯುವುದರೊಂದಿಗೆ ಚಪ್ಪಲಿಯಿಂದ ಹೊಡೆದು ಜಗ್ಗಾಡಿ ಶರ್ಟು ಹರಿದನು,ಅಲ್ಲದೇ"ಇನ್ನೊಮ್ಮೆ ಕಾಲಿಟ್ರೆ ಕಾಲ್ಮುರಿತೀವಿ'' ಎಂದು ಧಮ್ಕಿ ಹಾಕಿದನು.

ಒಬ್ಬನೇ ಅಸಹಾಯಕನಾಗಿ ಏನೂಮಾಡದೇ ಉಕ್ಕಿದ ರೋಷವನ್ನು ನುಂಗಿಕೊಂಡು ಗಂಗಾವತಿಗೆ ಬಂದು ಪೋಲಿಸ್ ಸ್ಟೇಷನ್‌ಗೆ ಹಲ್ಲೆ ಪ್ರಕರಣ ವಿವರಿಸಿ ದೂರು ಕೊಟ್ಟನು. ಮತ್ತು ಎ. ಸಿ, ಡಿ. ಸಿ. ಯವರಿಗೆ ದೌರ್ಜನ್ಯಕ್ಕೆ ತಕ್ಕ ಕ್ರಮ ಕೈಕೊಳ್ಳಬೇಕೆಂದು ಒತ್ತಾಯಿಸಿ ಮನವಿ ಮಾಡಿಕೊಂಡನು.

ಈ ಹಲ್ಲೆಯನ್ನು ಗಂಗಾವತಿಯ ಪ್ರಾಂತ ರೈತ ಸಂಘ ಹಾಗೂ ಎಸ್. ಎಫ್. ಐ. ನ ಶಾಖೆಗಳು ತೀವ್ರವಾಗಿ ಖಂಡಿಸಿವೆ. ಇಂತಹ ದುಷ್ಟರಿಂದ ಜನ್ಮ ದಿನೋತ್ಸವ ಆಚರಿಸಿಕೊಳ್ಳುವ ಡಾ : ಬಿ. ಆರ್ ಅಂಬೇಡ್ಕರರು ಇಂದಿಗೂ ಬದುಕಿದ್ದಲ್ಲಿ ಅವರ ಪರಿಸ್ಥಿತಿ ಏನಾಗುತ್ತಿತ್ತೋ ಎಂದು ನೆನೆಸಿಕೊಂಡರೆ ಮಿದುಳಿನಲ್ಲಿ ಗರಗಸವನ್ನಿಟ್ಟಂತಾಗುತ್ತದೆ. ....

ಕಪ್ಪು ಶಿಕ್ಷಣ

ಶಾಶ್ವತವಾದ ಸ್ಥಿತಿ ಪ್ರಾಣಿಗಳಂತೆ ಕೆಳಮಟ್ಟ ಬದುಕುವುದು ಎಂದು ಸ್ಥಾಪಿಸುವುದು''

ದಕ್ಷಿಣ ಆಫ್ರಿಕಾದ ಶಿಕ್ಷಣ ರೀತಿ ಸೃಜನಾತ್ಮಕ ಚಟುವಟಿಕೆಗೆ , ಉತ್ತೇಜನ ನೀಡುವುದಿಲ್ಲ. ವ್ಯಕ್ತಿಯ ಪ್ರತಿಭೆಯನ್ನು ವಿಕಾಸಗೊಳಿಸುವುದಿಲ್ಲ. ರಾಷ್ಟ್ರೀಯ ಆರ್ಥಿಕತೆಯ ಬೆಳವಣಿಗೆಯ ಮೇಲೆ ಪ್ರಭಾವ ಬೀರುವುದಿಲ್ಲ. ಅದರ ಬದಲು ಕಪ್ಪುಕಾರ್ಮಿಕನ ಯಂತ್ರದ ಸಹಾಯಕ ಅಂಗವನ್ನಾಗಿ ಪರಿವರ್ತಿಸುವ, ಅವನು ಏಕಾತ್ಮಕ ಒಂದೇ ಬಗೆಯ ಸರಳ ಜೀವನವನ್ನು ನಡೆಸಲು ಯೋಗ್ಯನಾಗುವಂತೆ ಮಾಡುವುದೇ ಅದರ ಉದ್ದೇಶವಾಗಿದೆ.

ಹಾಗಾಗಿ ಕಪ್ಪುಕಾರ್ಮಿಕ ತನ್ನ ಜೀವನದ ಉದ್ದಕ್ಕೂ ಏಳಿಗೆ ಪಡೆಯದೆ ಬದುಕಿನ ಏಣಿಯ ಕೆಳಹಂತದಲ್ಲೇ ಬದುಕುವಂತಾಗಿದೆ. ಬಹುತೇಕವಾಗಿ ನಿರುದ್ಯೋಗಿ ಕಾರ್ಮಿಕರೇ ಹೆಚ್ಚುವರಿ ಆದನ್ನು ತಲೆಗೆ ಹಚ್ಚಿಕೊಳ್ಳುವುದಿಲ್ಲ! ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದಷ್ಟು ದೊಡ್ಡ ಬಂಡವಾಳಶಾಹಿ ಬಿಳಿಯರಿಗೆ ಖುಸಿ. ಅಗ್ಗದ ಬೆಲೆಗೆ ಕಾರ್ಮಿಕರು ಮುಗಿ ಬೀಳುತ್ತಾರಲ್ಲ.

ಶಿಕ್ಷಣ ಮತ್ತು ಆರ್ಥಿಕತೆಯ ನಡುವಣ ಸಂಬಂಧ ತಾಂತ್ರಿಕ ಸಮಸ್ಯೆಯೊಂದೇ ಅಲ್ಲ ಇದು ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯನ್ನೇ ಪ್ರಶ್ನಿಸುತ್ತದೆ.

ದಲಿತ ಐಕ್ಯತಾ ದಿನ

ತಾ॥ ೧೪-೪-೮೨ರಂದು ಚಿಕ್ಕಮಗಳೂರಿನ ದ.ಸಂ.ಸ. ಜಿಲ್ಲಾ ಶಾಖೆಯ ಆಶ್ರಯದಲ್ಲಿ ಬೆಳ್ಳಿಗ್ಗೆ ರಾಜ್ಯಸಂಚಾಲಕ ಎಂ.ಡಿ. ಗಂಗಯ್ಯನವರ ಅಧ್ಯಕ್ಷತೆಯಲ್ಲಿ ದಲಿತ ಐಕ್ಯತಾ ದಿನವನ್ನಾಗಿ ಡಾ॥ ಬಿ. ಆರ್, ಅಂಬೇಡ್ಕರ್‌ರವರ ಜನ್ಮದಿನವನ್ನು ಆಚರಿಸಲಾಯಿತು. ದೇಶ ವ್ಯಾಪ್ತಿ ಬಡತನ, ಕೊಲೆ ಅತ್ಯಾಚಾರ, ಹಿಂಸೆಗಳಿಂದ ಬಡವರು ಸಾವಿನದವಡೆಯಲ್ಲಿದ್ದು ರಾಜಕೀಯ ಸ್ವಾರ್ಥ. ಜಾತಿದೇವರು, ಧರ್ಮಗಳ ಸಣ್ಣತನಗಳಿಂದ ದಿಕ್ಕಾಪಾಲಾಗಿರುವ ದಲಿತರು ಒಂದಾಗುಹಲ್ಲಿ ಅಂಬೇಡ್ಕರ್ ಜನ್ಮದಿನ ದಲಿತ ಐಕ್ಯತಾ ದಿನವಾಗಬೇಕೆಂದು ಹೇಳಲಾಯಿತು.

ಚಪ್ಪಲಿ ಮಾಡುವ ಕೈಗೆ ಚಪ್ಪಲಿ ಬಂದಾವು ಎಚ್ಚರ!

6ನೇ ಪುಟದಿಂದ

ಕಾರದ ಘೋಷಣೆ ಕೂಗಬೇಕೆಂದರು. ಯಾಕೊ ಯಾರೂ ಘೋಷಣೆ ಕೂಗುವ ಸ್ಥಿತಿಯಲ್ಲಿರದೆ ಆದಷ್ಟು ಅವರಿಗೆ ಹತ್ತಿರವಾಗುತ್ತಾ ಕೈಕುಲುಕಿ ತಬ್ಬಿಕೊಂಡು ತಮ್ಮಲ್ಲಿ ತುಂಬಿಕೊಳ್ಳುತ್ತಿದ್ದರು.

ನಂತರ ನಮ್ಮ ಗಡ್ಡದ ಕಾರ್ಯಕರ್ತ ಚಿತ್ರಹಿಂಸೆಯ ಸುದ್ದಿ ತಿಳಿಸಿದ. ಆ ವೇಳೆಗೆ ವಿಧಾನ ಸಭೆಯ ಅಧಿವೇಶನ ಮುಗಿದುಹೋಗಿತ್ತು. ಯಾರು ಈ ಹುಡುಗರಿಗೆ ಶಿಕ್ಷೆ ವಿದಿಸಿದ್ದರೋ ಅವರೆಲ್ಲಾ ಬೆಂಗಳೂರಿನ ಭೋಗದ ಕೊನೆಯ ಹನಿಯನ್ನೂ ಹೀರಿಕೊಂಡು ಇಲ್ಲಿಂದ ಕಾಲು ಕಿತ್ತಿದ್ದರು. ನಾನು ಇನ್ನೂ ನಡೆಯುತ್ತಿದ್ದ ವಿಧಾನಪರಿಷತ್ತಿಗೆ ಓಡಿ ವಿರೋಧ ಪಕ್ಷದ ಕೆಲವು ಸದಸ್ಯರಿಗೆ ವಿಷಯ ತಿಳಿಸಿದೆ. ಬಿ.ಜೆ. ಪಿ.ಯ ಸುಬ್ಬಯ್ಯ ಇದನ್ನು ಹ್ರಸ್ತಾಪಿಸಿ ಪೋಲೀಸರು ತಮ್ಮ ರಾಕ್ಷಸ ವರ್ತನೆಯಿಂದ ಸಭೆಗೆ ಅವಮಾನ ಮಾಡಿದ್ದಾರೆಂದು, ಸಭಾಪತಿಗಳ ಮಾತಿಗೆ ಮೂರುಕಾಸಿನ ಮರ್ಯಾದೆ ಕೂಡ ಇಲ್ಲವೆಂದು ಇದರಿಂದ ತಿಳಿದುಬರುತ್ತದೆ ಎಂದು ದೂರಿದರು. ಘೋಷಣೆ ಕೂಗಿದ ಹುಡುಗರನ್ನು ಕೇಡಿಗಳಂತೆ ನಡೆಸಿಕೊಳ್ಳುವುದು ಯಾತರ ನ್ಯಾಯ ಎಂದು 'ಆಕ್ಷೇಪಿಸಿದರು. ಸಭಾಧ್ಯಕ್ಷೆ ಬಸವರಾಜೇಶ್ವರಿ ಸಭಾಪತಿಗಳೊಂದಿಗೆ ಕೂಡಲೆ ಮಾತಾಡಿ ಕ್ರಮ ಕೈಗೊಳ್ಳುವೆ ಎಂದು ಭರವಸೆ ಕೊಟ್ಟರು.

ಇದಾಗಿ ಇನ್ನೇನು ತಿಂಗಳೇ ಉರುಳಿದೆ. ಸಂಘರ್ಷಸಮಿತಿ ಕೂಡ ಸಭಾಪತಿಗಳಿಗೆ ರಿಜಿಸ್ಟರ್ಡ್ ಅಂಚೆ ಮೂಲಕ ಮನವಿಯ ಮೇಲೆ ಮನವಿ ಸಲ್ಲಿಸಿದೆ. ಇಂದಿರಾಗಾಂಧಿಯ ಈ ಕೊಲೆಗಡುಕ ಕೈ, ಈಕೆಯ ಸೀರೆಯ ಹಿಂದೆ ಅಡಗಿಕೊಂಡ ನಮ್ಮ ದಲಿತ ಶಾಸಕರೆಂಬ ಗುಲಾಮರ ಪಿತೂರಿಯಿಂದ ನಮ್ಮ ಒಬ್ಬ ಕಾರ್ಯಕರ್ತನ ಕಿವಿ ಹಾಳಾಗಿರಬಹುದು. ಆದರೆ ಆತ ಅವತ್ತು ವಿಧಾನ ಸಭೆಯ ಗ್ಯಾಲರಿಯಲ್ಲಿ ಕೂಗಿದ ಧಿಕ್ಕಾರದ ಕೂಗು ಕೋಟಿ ಕೋಟಿ ದಲಿತರ ಕಿವಿ ತಲುಪುವುದರಲ್ಲಿ ನಮಗೆ ಸಂದೇಹ ಇಲ್ಲ. ಆದಾದ ಕೂಡಲೆ ದಲಿತ ಸಮುದಾಯದ ಉಳಿದೆಲ್ಲ ಇಂದ್ರಿಯಗಳು ಕೂಡ ಜಾಗೃತಗೊಳ್ಳುತ್ತವೆ. ಚಪ್ಪಲಿ ಮಾಡುವ ಕೈಗಳು ಚಪ್ಪಲಿ ಕೈಗೆತ್ತಿಕೊಳ್ಳುವ ದಿನಗಳು ಇನ್ನೇನು ಬಂದೇಬರುತ್ತವೆ. ■

ಭೂಮಿ ನುಂಗಲು ಗಂಗಾವತಿ ಭೂಮಾಲೀಕರ ಸನ್ನಾಹ

ರಾಯಚೂರು ಜಿಲ್ಲೆ ಗಂಗಾವತಿ ತಾಲ್ಲೂಕಿನಲ್ಲಿ ಸಾಕಷ್ಟು ಸರ್ಕಾರಿ ಭೂಮಿಯಿದ್ದರೂ ಅದನ್ನು ಭೂರಹಿತರಿಗೆ ಹಂಚುವಲ್ಲಿ ಅನೇಕ ಅಕ್ರಮಗಳು ನಡೆದಿವೆ, ಭೂಮಿಗಾಗಿ ಇಲ್ಲಿನ ಭೂರಹಿತ ದಲಿತರು ಅನೇಕ ಅರ್ಜಿಗಳನ್ನು ಕೊಟ್ಟಿದ್ದರೂ ಅವು ಕಸದ ಬುಟ್ಟಿ ಸೇರಿವೆ. ಭೂಮಿ ಕೇಳಿ ದಲಿತರು ದ.ಸಂ.ಸ. ನೇತೃತ್ವದಲ್ಲಿ ಧರಣಿ ಕುಂತರು. ತಾಲ್ಲೂಕಾಫೀಸಿನ ಆಕ್ರಮಗಳ ವಿರುದ್ಧ ಧರಣಿ ಕುಂತದ್ದಕ್ಕೆ ತಾಸೀಲ್ದಾರರು ಕೆರಳಿ ಕೆಂಡವಾದರು.

ಸರ್ಕಾರಿ ಭೂಮಿಯನ್ನು ನುಂಗಿಹಾಕಲು ಭೂಮಾಲೀಕರ ಪ್ರಯತ್ನಗಳು ನಡೆದಿವೆ. ಇದಕ್ಕೆ ಷಾಮೀಲಾಗಿರುವ ತಾಸೀಲ್ದಾರರು ಬಡವರಿಗೆ ಭೂಮಿ ಹಂಚಲಾರದವರಾಗಿದ್ದಾರೆ,

ತಾಸೀಲ್ದಾರರ ನಿಷ್ಕ್ರಿಯತೆಯನ್ನು ವಿರೋಧಿಸಿ ಭೂಮಿ ಹಂಚುವಂತೆ ಒತ್ತಾಯಿಸಿ ಗಂಗಾವತಿ ತಾಲ್ಲೂಕು ದ.ಸಂ.ಸ. ಶಾಖೆಯು 30-೪-೮೨ರಂದು ಅಂಬೇಡ್ಕರ್ ಜಯಂತಿ ಆಚರಿಸುವುದಾಗಿ ಕರಪತ್ರ ಹೊರಡಿಸಿದರು. ಗೋಕಾಕ್‌ವರದಿ ಹಿನ್ನೆಲೆಯಲ್ಲಿ ೨೫-೪-೮೨ ರವರೆಗೆ ಜಾರಿಯಲ್ಲಿದ್ದ ೧೪೪ ಸೆಕ್ಷನ್ನನ್ನು ಮತ್ತೊಂದು ವಾರದವರೆಗೆ ವಿಸ್ತರಿಸಲಾಯಿತು. ಇದು ದ.ಸಂ.ಸ. ಆಚರಿಸಬೇಕಾಗಿದ್ದ ಅಂಬೇಡ್ಕರ್ ಜಯಂತಿಗೆ ತಡೆಯಾಯಿತು. ಆದರೆ ೨೬-೪-೮೨ರಂದು ನಿಷೇಧಾಜ್ಞೆ ಜಾರಿಯಲ್ಲಿದ್ದರೂ ಬಸವ ಜಯಂತಿ ಆಚರಿಸಲು ಮೇಲ್ಕಂಡ ಕುತಂತ್ರನಾಠ ತಾಸೀಲ್ದಾಠರು ಪರವಾನಗಿ ನೀಡಿದ್ದರು.

ಮೇಲ್ಜಾತಿಯ ಕ್ರೂರ ಅಧಿಕಾರಿಗಳಿಗೆ ದ.ಸಂ,ಸ. ಹೋರಾಟದ ಮೂಲಕ ಪಾಠ ಕಲಿಸಬೇಕಾಗಿದೆ ಅಷ್ಟೆ..

–ಭಾಗ್ಯವಂತ

ನಿಮ್ಮ ದೇವರಿಗೆ ನಮಸ್ಕಾರ!

"ಅಸ್ಪೃಶ್ಯನ ಹಣವನ್ನು ನೀವು ಕಸಿವಿಸಿಯಿಲ್ಲದೆ ತೆಗೆದುಕೊಳ್ಳುತ್ತೀರಿ. ಅಸ್ಪೃಶ್ಯನೊಬ್ಬ ದೇವಸ್ಥಾನ ಕಟ್ಟಿಸಿದರೆ, ನೀವು ಕುಟುಂಬ ಪರಿವಾರ ಸಮೇತ ಅಲ್ಲಿಗೆ ಹೋಗುತ್ತೀರಿ. ದೇವಸ್ಥಾನದಲ್ಲಿ ದೇವರ ಪ್ರತಿಷ್ಠೆ ಮಾಡುತ್ತೀರಿ. ಎಲ್ಲವನ್ನು ಕಬಳಿಸುತ್ತೀರಿ— ಅಸ್ಪೃಶ್ಯ ಅದನ್ನು ಮುಟ್ಟಿರದೆ ಇದ್ದಲ್ಲಿ ಮಾತ್ರ ದಕ್ಷಿಣೆ ತೆಗೆದು ಕೊಳ್ಳುತ್ತೀರಿ; ಇದರಲ್ಲಿ ಯಾವ ಪಾಪವೂ ಇಲ್ಲ; ಇರಕೂಡದು. ಆದರೆ ಅಸ್ಪೃಶ್ಯ ದೇವಾಲಯದೊಳಗೆ ಮಾತ್ರ ಕಾಲಿರಿಸುವಂತಿಲ್ಲ; ಹಾಗೆ ಮಾಡಿದರೆ ದೇವರು ಅಪವಿತ್ರನಾಗಿ ಬಿಡುತ್ತಾನೆ. ಇತರರ ಸ್ಪರ್ಶಮಾತ್ರದಿಂದಲೇ ಅಪವಿತ್ರನಾಗಿ ಬಿಡುವಷ್ಟು ನಿಮ್ಮ ದೇವರು ನಿರ್ಬಲನಾಗಿದ್ದರೆ...ಅವನಿಗೆ ದೂರದಿಂದಲೇ ನನ್ನ ನಮಸ್ಕಾರ.

(ಅನು : ಡಿ.ವಿ.ಕೆ.) –ಪ್ರೇಮಚಂದ್

ಹಳ್ಳಿಗಾಡಲ್ಲಿ ಅಂಬೇಡ್ಕರ್ ರೋಮಾಂಚನ

ಅಂಬೇಡ್ಕರ್ ಹೆಸರು ತುಂಬ ತಡವಾಗಿಯಾದರೂ ಹಳ್ಳಿಗಾಡ ಗುಡಿಸಲುಗಳಲ್ಲಿ ಮೊಳಗ ತೊಡಗಿದೆ. ಹಸಿವು, ದಾರಿದ್ರ್ಯಗಳಿಂದ ಹುದುಗಿ ಹೋಗಿದ್ದ ದಲಿತರಿಗೆ ಅಂಬೇಡ್ಕರ್ ಹೆಸರೇ ಅತ್ಯಂತ ರೋಮಾಂಚನವನ್ನು ಉಂಟುಮಾಡ ತೊಡಗಿದೆ.

ಇತ್ತೀಚೆಗೆ ಕೋಲಾರದ ಕೈಯಳತೆಯಲ್ಲೇ ಇರುವ ಅರಹಳ್ಳಿ ಎನ್ನುವ ಊರಲ್ಲಿ ಸವರ್ಣೀಯರು ಒಂದು ಬಯಲಾಟ ಏರ್ಪಡಿಸಿದ್ದರು. ಬಯಲಾಟದ ನಡುವೆ ತೂಕಡಿಸುತ್ತಿದ್ದ ಮೈಕಿನಲ್ಲಿ ಕೆಲವು ಕಿಡಿಗೇಡಿ ಸವರ್ಣೀಯರು 'ಅಂಬೇಡ್ಕರ್‌ಗೆ ಧಿಕ್ಕಾರ' ಎಂದು ಕಿರುಚಿದರು ಈ ಕಿಡಿಗೇಡಿಗಳು ಮುಂದಿನ ಯಾವುದೇ ಪರಿಣಾಮ ಕುರಿತು ಯೋಚಿಸಿರಲಿಲ್ಲವೆನಿಸುತ್ತದೆ. ಈ ಧಿಕ್ಕಾರ ಕಿವಿಗೆ ಬಿದ್ದಿದ್ದೆ ತಡ ಸಿಟ್ಟಿಗೆದ್ದ ಯುವಕರ ತಂಡವೊಂದು ರಂಗಕ್ಕೆ ಜಿಗಿದು ಅಂಬೇಡ್ಕರ್‌ರವರನ್ನು ಧಿಕ್ಕರಿಸಿದ ಸವರ್ಣೀಯ ಕಿಡಿಗೇಡಿಗಳ ಕೊರಳು ಪಟ್ಟಿ ಜಗ್ಗಿ ಎಳೆದು ಸಕತ್ತಾಗಿ ಲಾತ ಇಕ್ಕಿದರು. ಈ ಲಾತಾದ ನೋವು ಇರುವವರೆಗೂ ಅಂಬೇಡ್ಕರ್ ನೆನಪು ಕೂಡ ಉಳಿಯುವುದರಿಂದ ದಲಿತ ಯುವಕರು ಇಂಥ ಕಿಡಿಗೇಡಿಗಳಿಗೆ ಆಗಾಗ ಲಾತ ಕೊಡುತ್ತಾ ಅಂಬೇಡ್ಕರ್‌ರವರನ್ನು ನೆನಪು ಮಾಡಿಕೊಡುತ್ತಿರಬೇಕು. ■

ದಲಿತರ ಕಗ್ಗೊಲೆ : ಸರ್ಕಾರಕ್ಕೆ ಲೇಖಕರ ಎಚ್ಚರಿಕೆ

ಬೆಲ್ಚಿ, ಪಿಪ್ರಾ, ದೇವೋಲಿ, ಸಾಧುಪುರ, ಕೆಸ್ರಾರ, ಮೊದಲಾದೆಡೆಗಳಲ್ಲಿ ನಡೆದ ದಲಿತರ ಮೇಲಿನ ಕಗ್ಗೊಲೆಗಳನ್ನು ಪ್ರತಿಭಟಿಸಿ, ಏ. ೧೪ರಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ ಬೆಂಬಲದೊಡನೆ ಬರಹಗಾರರು, ಕಲಾವಿದರು ಮತ್ತು ವಿಚಾರವಂತರು ಮೈಸೂರು, ಧಾರವಾಡ ಬೆಂಗಳೂರಲ್ಲಿ ಏಕಕಾಲಕ್ಕೆ ಧರಣಿ ಸತ್ಯಾಗ್ರಹ ನಡೆಸಿ ವಿಶೇಷ ರೀತಿಯಲ್ಲಿ ಅಂಬೇಡ್ಕರ್ ಜನ್ಮ ದಿನಆಚರಿಸಿದರು.

ಧರಣಿಯಲ್ಲಿ ಚದುರಂಗ, ಪಿ. ಲಂಕೇಶ್, ಬಸವರಾಜ ಕಟ್ಟೀಮನಿ, ದೇವೇಂದ್ರಕುಮಾರ ಹಕಾರಿ, ಮಿಶ್ರಾ, ಪೂರ್ಣಚಂದ್ರತೇಜಸ್ವಿ. ವಿಶ್ವನಾಥ ಮಿರ್ಲೆ, ಡಾ॥ ಸಿ.ಪಿ.ಕೆ.ಎನ್. ಈಶ್ವರ್, ಬಿ. ಕೃಷ್ಣಮೂರ್ತಿ, ಚಂದ್ರಶೇಖರ ಪಾಟೀಲ ಡಾ॥ ಪಿ. ರಾಮಮೂರ್ತಿ, ಡಾ॥ ಪಿ. ಆರ್. ತಿಪ್ಪೇಸ್ವಾಮಿ, ಜಿ. ಹೆಚ್. ನಾಯಕ್, ಹೆಚ್. ಎಂ. ಚನ್ನಯ್ಯ, ಡಿ. ಎಸ್. ಶಿವಪ್ಪ, ಶಿವರಾಮ ಐತಾಳ, ಎ. ರಾಮಲಿಂಗಂ, ಸುಧಾಕರ್, ವಿ. ಹೆಚ್. ಗೌಡ, ಪ. ಮಲ್ಲೇಶ್, ರಂಜಾನದರ್ಗಾ, ಡಾ॥ ಎ. ಎಲ್. ಶಿವರುದ್ರಪ್ಪ, ಸರಸ್ವತೀ, ಹೆಚ್. ವಿ. ಶ್ರೀರಂಗರಾಜು, ಹೆಚ್. ಸಿದ್ದಲಿಂಗಯ್ಯ, ಚೆನ್ನವೀರಕಣವಿ, ಬರಗೂರ್, ಬಿ. ಎಸ್. ನಾಗರತ್ನ, ರೇಖಾರಾಣಿ, ನರೇಂದ್ರ ಸಿಂಗ್, ಬಾಬಜಾನ್‌ಅತ್ತಾರ,ಡಾ॥ಸಂಜೀವಯ್ಯ ರಾಜಶೇಖರಕೋಟಿ, ಎನ್. ಎಸ್. ಪುಷ್ಪಾ, ವಿಜಯದಬ್ಬೆ, ಕೆಸ್ತೂರ್ ಬಸವರಾಜ್, ದೇವಯ್ಯ ಹರವೆ, ದೇವನೂರ ಮಹದೇವ ಎಚ್ಚೆಸ್ಕೆ ಮುಂತಾಗಿ ಮೂರು ಕೇದ್ರಗಳಿಂದಲೂ ಒಟ್ಟು ನಾಲ್ಕುನೂರು ಜನರಷ್ಟು ವಿಚಾರವಂತರು ಭಾಗವಹಿಸಿದ್ದರು.

ಧರಣಿಕಾರರು ಸರ್ಕಾರಕ್ಕೆ ಇಂಥ ಭೀಕರ ಕೊಲೆಗಳನ್ನು ತಡೆಗಟ್ಟುವುದು ಸರ್ಕಾರದ ಹೊಣೆ ಎಂದೂ, ಇನ್ನಾದರೂ ಕೊಲೆಯಿಲ್ಲದ ವ್ಯವಸ್ಥೆಗಾಗಿ ಸರ್ಕಾರ ದಿಟ್ಟ ಹೆಜ್ಜೆ ಇಡದಿದ್ದಲ್ಲಿ ಅದಕ್ಕೆ ಅಧಿಕಾರದಲ್ಲಿ ಮುಂದುವರಿಯುವ ನೈತಿಕತೆ ಇಲ್ಲ ಎಂದೂ ಎಚ್ಚರಿಕೆ ನೀಡಿದರು. ಈ ಎಚ್ಚರಿಕೆ ಪತ್ರವನ್ನು ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿಯವರಿಗೆ ಕಳುಹಿಸಲಾಯ್ತು.

....

ಗೋಕಾಕ್ ವರದಿಯ ಗುಂಡೂ ಅವತಾರ

(ಮೊದಲ ಪುಟದಿಂದ)

ಅಂತೂ ಒಂದು ನಿರ್ಧಾರಕ್ಕೆ ಬರಬೇಕಾಯ್ತು.

ಗೊ ಕಾಕ್‌ವರದಿಯ ಪ್ರಕಾರ ೧೫೦ಅಂಕಕ್ಕೆ ಕಡ್ಡಾಯ ಕನ್ನಡ, ೧೦೦ಅಂಕದ ಎರಡನೆ ಭಾಷೆ ಮತ್ತು ೫೦ ಅಂಕದ ಮೂರನೆ ಭಾಷೆ ಇತ್ತು. ಈ ಪ್ರಕಾರ ಭಾಷಾ ಅಲ್ಪಸಂಖ್ಯಾತರು ಪ್ರಥಮಭಾಷೆ ಕಡ್ಡಾಯಕನ್ನಡ ಕಲಿತು ಎರಡನೆ ಭಾಷೆಯಾಗಿ ಇಂಗ್ಲಿಷ್ ೧೦೦ ಅಂಕಕ್ಕೆ ತೆಗೆದುಕೊಂಡರೆ ಅವರ ಮಾತೃಭಾಷೆಯನ್ನು ೫೦ ಅಂಕಕ್ಕೆ ಕಲಿಯಬೇಕಾಗುತ್ತಿತ್ತು. ಅಥವಾ ಮಾತೃಭಾಷೆಯನ್ನು ೧೦೦ ಅಂಕಕ್ಕೇನಾರು ಕಲಿತರೆ ಅವರು ಮೂರನೆ ಭಾಷೆಯಾಗಿ ೫೦ ಅಂಕಕ್ಕೆ ಇಂಗ್ಲಿಷ್ ತೆಗೆದುಕೊಳ್ಳಬೇಕಾಗುತ್ತಿತ್ತು. ಫೇಲಾಗಿ ವಿದ್ಯಾಭ್ಯಾಸ ನಿಂತರೂ ಸರಿಯೆ ಇಂಗ್ಲಿಷನ್ನು ಬಿಟ್ಟುಕೊಡದ ಕನ್ನಡಿಗರ ಅಲ್ಪಸಂಖ್ಯಾತರ ಗುಲಾಮಿ ಮೋಹದಿಂದಾಗಿ ಗೋಕಾಕ್‌ವರದಿ ಇಕ್ಕಟ್ಟಿಗೆ ಸಿಕ್ಕಿತ್ತು. ಗೋಕಾಕ್‌ವರದಿಗೆ ಭಾಷಾಅಲ್ಪಸಂಖ್ಯಾತರ ಅಸಮಾಧಾನದ ಹೊಗೆಯಾಡುತ್ತಿತ್ತು. ಇದರಿಂದಾಗಿ, ಎಲ್ಲಿ ಈ ಗೋಕಾಕ್‌ವರದಿ ಚಳವಳಿ ಮತೀಯ ಗಲಭೆಗೆ ತಿರುಗಿ ಗೋಕಾಕ್‌ವರದಿಯೇ ಮರೆತುಹೋಗುತ್ತೊ ಎಂಬ ಆತಂಕ ತಳಮಳ ಅನೇಕರಿಗಿತ್ತು. ಇದರಿಂದಾಗಿ ಉಸಿರು ಬಿಗಿಹಿಡಿದು ಚಳವಳಿ ನಡೆಸುವಂತಾಗಿತ್ತು.ನೂರಂಕಕ್ಕೆಕನ್ನಡ ಏಕೈಕ ಪ್ರಥಮಭಾಷೆ ಮಾಡಿ ಎರಡನೆ ಭಾಷೆ ಮೂರನೆ ಭಾಷೆಗೆ ತಲಾ ೭೫ ಅಂಕವಿರಿಸುವುದು ಇದ್ದುದರಲ್ಲಿ ಉತ್ತಮವಾದುದು.

ಸರ್ಕಾರದ ಈಗಿನ ನಿರ್ಧಾರದಲ್ಲಿ ಕನ್ನಡವನ್ನು ಭಾಷಾ ಅಲ್ಪಸಂಖ್ಯಾತರಿಗೂ ಕಡ್ಡಾಯ ಮಾಡಿ, ಸಂಸ್ಕೃತಕ್ಕೆ ಮಾತೃಭಾಷೆ ಸ್ಥಾನ ಕಿತ್ತು ಹಾಕಿದಂಥ ಗುಣಾಂಶಗಳಿದ್ದರೂ ಕೂಡ ೩೫೦ ಅಂಕಗಳ ಯಮಭಾರ ಅಥವಾ ಗುಂಡೂರಾಯರ ಭಾರ ಎಲ್ಲಾಮಕ್ಕಳ ತಲೆಗೆ ಬಿದ್ದು ತಲೆಎತ್ತದಂತಾಗಿದೆ. ೧೦೦ಅಂಕದ ಮೂರನೆ ಭಾಷೆಯು ಪರೀಕ್ಷೆಗೆ ಇದ್ದ ಮಕ್ಕಳ ಕುತ್ತಿಗೆಗೆ ಬಂದಿದೆ. ಹಳ್ಳಿಗಾಡಿನ ಮಕ್ಕಳ ವಿದ್ಯಾಭ್ಯಾಸದ ಕಾಲನ್ನು ಕತ್ತರಿಸಿದಂತಾಗಿದೆ. ಸರ್ಕಾರದ ಈ ಗುಂಡೂಭಾರದ ಭಾಷಾನೀತಿಯನ್ನು ಧಿಕ್ಕರಿಸಬೇಕಾಗಿದೆ,

ಈ ಭಾಷಾ ಭಾರಕ್ಕೆ ಚಳವಳಿಯನ್ನು ತಿರುಗಿಸಿ ಚಳವಳಿ ಮುಂದುವರಿಸುವ ಅಗತ್ಯವಿದೆ. ಈ ಸರ್ಕಾರದ ನಿರ್ಧಾರದಿಂದ ಚಳವಳಿಗಾರರಿಗೆ ಉಂಟಾಗಿರುವ ಉತ್ತಮ ವಾತಾವರಣವೇನೆಂದರೆ – ಈ ಹಿಂದೆ ಗೋಕಾಕ್‌ವರದಿಗಾಗಿ ಒತ್ತಾಯಿಸುತ್ತಿದ್ದಾಗ ಮತೀಯ ಗಲಭೆ ಭೀತಿಯಿಂದ ಉಸಿರು ಬಿಗಿಹಿಡಿದ, ಚಳವಳಿ ನಡೆಸುತ್ತಿದ್ದ ಚಳವಳಿಗಾರರು ಈಗ ಭಾಷಾಭಾರವನ್ನು ಚಳವಳಿಯ ವಸ್ತು ಮಾಡಿಕೊಂಡರೆ ಮತೀಯ ಆತಂಕವಿಲ್ಲದೆ ಅಲ್ಪಸಂಖ್ಯಾತರನ್ನು ಒಳಗೊಂಡು ಚಳವಳಿ ಮುಂದುವರಿಸಬಹುದು. ಈ ದಿಕ್ಕಲ್ಲಿ ನಡೆದು ಚಳವಳಿ ಕಾವನ್ನು ಮುಂದಿನ ಶೈಕ್ಷಣಿಕ ವರ್ಷ ವಿಶ್ವಕನ್ನಡ ಸಮ್ಮೇಳನದವರೆಗೆ ಹಿಡಿದಿಟ್ಟುಕೊಂಡರೂ ಸಾಕು– ಭಾಷಾಭಾರ ಗೂಂಡೂಭಾರ ಎರಡನ್ನು ಇಳಿಸಬಹುದು. ಇನ್ನೂ ಮುಂದುವರಿದರೆ, ಪ್ರೌಢ ಶಿಕ್ಷಣದವರಿಗಾದರೂ ಇಂಗ್ಲಿಷ್ ಮಾಧ್ಯಮವಿಲ್ಲದ ವ್ಯವಸ್ಥೆಗಾಗಿ ಹೋರಾಡಿ ಕನ್ನಡಿಗರ ಗುಲಾಮಿತನವನ್ನು ಅರ್ಧದಷ್ಟಾದರೂ ಕಳೆದುಕೊಳ್ಳಬಹುದು.

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ವಿನ್ಯಾಸ ಪ್ರಿಂಟರ್ಸ್, ಮೈಸೂರು–9 ಇಲ್ಲಿ ಮುದ್ರಿಸಲ್ಪಟ್ಟು ಎಚ್.ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ : ಮಾಸ್ತಿಗುಡಿ, 2ನೇ ಕ್ರಾಸ್, ಅಶೋಕಪುರಂ, ಮೈಸೂರು–570008.